ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ


ಮಾಸಪತ್ರಿಕೆ – 15 ಅಕ್ಟೋಬರ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

ಸಂಪುಟ-24 ಸಂಚಿಕೆ-10 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ದೇವಿಗೆ ಚಿನ್ನದ ಲೇಪನದ ದೃಷ್ಟಿ ಕೊಡುಗೆ

ಶ್ರೀ ಶಾರದಾ ದೇವಿಯ ಅಲಂಕಾರಕ್ಕೆ ಚಿನ್ನದ ಲೇಪನದ ದೃಷ್ಟಿಯನ್ನು (ಅಂದಾಜು ವೆಚ್ಚ ರೂ.80,000) ನಮ್ಮ ಸಂಘದ ಮಾಜಿ ಕೋಶಾಧಿಕಾರಿಯಾದ ಶ್ರೀ ಸುಧಾಕರ ರಾವ್ ಮತ್ತು ಶ್ರೀಮತಿ ಜ್ಯೋತಿ ಸುಧಾಕರ ರಾವ್ ದಂಪತಿಗಳು ತಾ.18.09.2023ರಂದು ಬೆಳಗ್ಗೆ ಶ್ರೀ ದೇವಿಗೆ ಸಮರ್ಪಿಸಿದರು. ಈ ಸಂದರ್ಭದಲ್ಲಿ ಸುಧಾಕರ ರಾವ್ ಮತ್ತು ಜ್ಯೋತಿ ಸುಧಾಕರ ದಂಪತಿಗಳು, ಸಂಘದ ಅಧ್ಯಕ್ಷರು ಮಂಜುನಾಥ್ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಮ್ಯಾನೇಜರ್ ಅಜಿತ್ ರಾವ್, ಅರ್ಚಕರು ಧರಣೇಶ್ ಭಟ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ
ಶ್ರೀ ಶಾರದಾ ಮಂದಿರ, ಕುಂಜಿಬೆಟ್ಟು
ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102
Phone : 0820-2958444, 8971185844

### ಶ್ರೀ ಶಾರದಾ ಮಂದಿರದಲ್ಲಿ ನವರಾತ್ರಿಯ ಮಹೋತ್ಸವ

ತಾ. 15–10–2023 ರಿಂದ ತಾ. 23–10–2023ರವರೆಗೆ ಶ್ರೀ ಶಾರದಾ ಮಂದಿರದಲ್ಲಿ
ಬೆಳಗ್ಗೆ ಘಂಟೆ 8.00ಕ್ಕೆ ಪ್ರಾತಃ ಪೂಜೆ ಮಧ್ಯಾಹ್ನ 12.00ಕ್ಕೆ ಕಲ್ಪೋಕ್ತ ಪೂಜೆ
ಪ್ರತಿದಿನ ಸಂಜೆ 5.00 ರಿಂದ ದುರ್ಗಾ ನಮಸ್ಕಾರ ಪೂಜೆ (ಸೇವಾರ್ಥಿಗಳಿಂದ) ರಾತ್ರಿ 8.00ಕ್ಕೆ ವಿಶೇಷ ಪೂಜೆ
ರಾತ್ರಿ 8.30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.
ಪ್ರತಿದಿನ ಸಂಜೆ ಶಾಂಕರ ತತ್ವ ಪ್ರಸಾರ ಅಭಿಯಾನ ಉಡುಪಿ ಜಿಲ್ಲೆ ಇವರ ಸಂಘಟನೆಯಲ್ಲಿ ಆಹ್ವಾನಿತ ತಂಡಗಳಿಂದ
ಸಂಜೆ 6.00 ರಿಂದ 7.15ರವರೆಗೆ ಭಜನಾ ಕಾರ್ಯಕ್ರಮ ಜರುಗಲಿದೆ.

**ತಾ. 24–10–2023ರ ಮಂಗಳವಾರ ವಿಜಯದಶಮಿಯಂದು**
ಪೂರ್ವಾಹ್ನ ಗಂಟೆ 9.00ರಿಂದ
**ಶ್ರೀ ಚಂಡಿಕಾಯಾಗ ಹಾಗೂ ಶ್ರೀ ಶಾರದಾ ಪೂಜೆ**
ಮಧ್ಯಾಹ್ನ ಘಂಟೆ 1.00ಕ್ಕೆ **ಮಹಾ ಅನ್ನಸಂತರ್ಪಣೆ**

ಪೂರ್ವಾಹ್ನ ಗಂಟೆ 9.00 ರಿಂದ : ನಮ್ಮ ಸಮಾಜ ಬಾಂಧವರಿಗಾಗಿ ಸ್ಪರ್ಧೆಗಳು ನಡೆಯಲಿವೆ
1–4ನೇ ತರಗತಿಯವರೆಗೆ, 5–8ನೇ ತರಗತಿಯವರೆಗೆ, 9–ಪದವಿಪೂರ್ವ ತರಗತಿವರೆಗೆ ಪ್ರತ್ಯೇಕವಾಗಿ,
ಭಕ್ತಿಗೀತೆ, ಚಿತ್ರರಚನೆ, ರಂಗವಲ್ಲಿ, ಕಂಠಪಾಠ ಸ್ಪರ್ಧೆಗಳು ಜರುಗಲಿವೆ.
ಮುಕ್ತ ವಿಭಾಗದಲ್ಲಿ ಶಂಖ ಊದುವ ಹಾಗೂ ಚೂರ್ಣಿಕೆ ಸ್ಪರ್ಧೆ ಏರ್ಪಡಿಸಲಾಗಿದೆ.

ಅಪರಾಹ್ನ 2.30 ರಿಂದ : ಸಭಾ ಕಾರ್ಯಕ್ರಮ, ಬಹುಮಾನ ವಿತರಣೆ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆ.
ಅಪರಾಹ್ನ 3.30 ರಿಂದ : ಮಹಿಳಾ ವೇದಿಕೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ
ಸಂಜೆ 4.00 ರಿಂದ : ಶ್ರೀ ಶಾರದಾ [illegible] ಯಕ್ಷಗಾನ ಕಲಾವಿದರು ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ ಇವರಿಂದ
ಯಕ್ಷಗಾನ : ವೀರ ಬರ್ಬರೀಕ

ಸರ್ವರಿಗೂ ಆದರದ ಸ್ವಾಗತ ಬಯಸುವ
ಅಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು
ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ವಿ.ಸೂ. : ಈ ವರ್ಷವೂ ನವರಾತ್ರಿಯಲ್ಲಿ ತಾ. 15–10–2023 ರಿಂದ ತಾ. 23–10–2023ರವರೆಗೆ ಪ್ರತೀ ದಿನ ಸಂಜೆ ಶ್ರೀ ಶಾರದಾ ಮಂದಿರದಲ್ಲಿ ದುರ್ಗಾ ನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗಿದೆ. ದುರ್ಗಾ ನಮಸ್ಕಾರ ಸೇವೆಯ ಸೇವಾರ್ಥಿಗಳಾಗಬಯಸುವವರು ರೂ. 6000/- ಸೇವಾದರವನ್ನು ನೀಡಿ ಪೂಜೆಯಲ್ಲಿ ಪಾಲ್ಗೊಳ್ಳಬಹುದು. [illegible] ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, [illegible] 9449254846ನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

ನವರಾತ್ರಿಯ ವಿಶೇಷ ಸೇವೆಗಳು
ಯಾಗಸೇವೆ ರೂ. 1000.00
ಕಲ್ಪೋಕ್ತ ಪೂಜೆ ರೂ. 500.00
ಹೂವಿನ ಪೂಜೆ ರೂ. 200.00

## ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ



ದಿನಾಂಕ 08.10.2023 ರವಿವಾರ ಸಾಯಂಕಾಲ ಸಂಘದ 55ನೇ ವರ್ಷದ ವಾರ್ಷಿಕ ಮಹಾಸಭೆಯು ಶ್ರೀ ಶಾರದಾ ಮಂಟಪದಲ್ಲಿ ಜರಗಿತು. ಆರಂಭದಲ್ಲಿ ಶ್ರೀಮತಿ ಜಯಲಕ್ಷ್ಮಿ ಮುರಳೀಧರ ರಾವ್ ಪ್ರಾರ್ಥನೆಗೈದರು. ಕಾರ್ಯದರ್ಶಿ ಪಿ. ಪ್ರಭಾಕರ ಭಂಡಿ 2022–23ನೇ ವಾರ್ಷಿಕ ವರ್ಷದಲ್ಲಿ ಅಗಲಿದ ಹಿರಿಯರನ್ನು ಸ್ಮರಿಸಿ ನುಡಿನಮನ ಸಲ್ಲಿಸಿರುವುದರೊಂದಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ ಹಾಗೂ 2021–22ನೇ ವಾರ್ಷಿಕ ಮಹಾಸಭೆಯ ವರದಿ ಮಂಡನೆ ಹಾಗೂ ಅಂಗೀಕಾರ ಪಡೆಯಲಾಯಿತು. 2022–23ನೇ ವರ್ಷದ ಕಾರ್ಯಕ್ರಮ ಹಾಗೂ ಚಟುವಟಿಕೆಗಳನ್ನು ಮಂಡಿಸಿ, ವಿಶ್ಲೇಷಣೆಯ ನಂತರ ಅಂಗೀಕಾರ ಪಡೆಯಲಾಯಿತು. ಕೋಶಾಧಿಕಾರಿ ಸಿ.ಎ. ಗಣೇಶ್ ಹೆಬ್ಬಾರ್ 2022–23ನೇ ವರ್ಷದ ಆಯ–ವ್ಯಯ ಮತ್ತು ಆಸ್ತಿ–ಜವಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯನ್ನು ಮಂಡಿಸಿ ವಿಮರ್ಶೆ, ಚರ್ಚೆ, ಪ್ರಶ್ನಾವಳಿ ನಂತರ ಅಂಗೀಕಾರ ಪಡೆಯಲಾಯಿತು.

ಮುಖ್ಯ ಸಭಾಂಗಣದ ನವೀಕರಣ ಹಾಗೂ ಎ.ಸಿ. ಅಳವಡಿಕೆಯ ಲೆಕ್ಕಾಚಾರ

(5ನೇ ಪುಟಕ್ಕೆ)

## ಶೃಂಗೇರಿ ಶ್ರೀ ಶಂಕರ ಮಠದ ಉಡುಪಿ ಶಾಖೆ ನೋಂದಣಿ



ಶೃಂಗೇರಿ ಶ್ರೀ ಶಂಕರ ಮಠದ ಉಡುಪಿ ಶಾಖೆಯ ನಿರ್ಮಾಣದ ಪ್ರಥಮ ಹೆಜ್ಜೆಯಾಗಿ ಎರಡು ಎಕರೆ ವಿಸ್ತೀರ್ಣದ ನಿವೇಶನ ತಾರೀಕು 25.09.2023ರಂದು ನೋಂದಣಿಯಾಗಿರುತ್ತದೆ. ಶೃಂಗೇರಿ ಮಠದ ಆಡಳಿತಾಧಿಕಾರಿಗಳಾದ ಪದ್ಮಶ್ರೀ ಡಾ.ವಿ.ಆರ್. ಗೌರೀಶಂಕರ್‌ರವರು ನೋಂದಣಿ ಪತ್ರವನ್ನು ಬಾ.ಸಾಮಗ ಇವರಿಗೆ ಹಸ್ತಾಂತರಿಸಿದರು ಎಂದು ಧರ್ಮಾಧಿಕಾರಿಗಳಾದ ವಾಗೀಶ ಶಾಸ್ತ್ರೀಯವರು ತಿಳಿಸಿರುತ್ತಾರೆ.

### ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | | |
|---|---|---|
| 97. | ರಮೇಶ ರಾವ್ ಉಡುಪಿ | 25,000/– |
| 98. | ಕೆ. ಉಮೇಶ ರಾವ್ ಉಡುಪಿ | 50,000/– |
| 99. | ಪ್ರಶಾಂತ ಬಿ. ಕೆ. ಬೆಂಗಳೂರು | 1,01,000/– |
| 100. | ಡಾ। ವೈ. ಸುದರ್ಶನ್ ರಾವ್ ಉಡುಪಿ | 1,00,000/– |
| 101. | ಕುಂಜಾರು ಕೃಷ್ಣ ರಾವ್, ಬೆಂಗಳೂರು | 1,00,001/– |
| 102. | ಪಿ. ಶ್ರೀಕಾಂತ ರಾವ್, ಹೈದರಾಬಾದ್ | 24,000/– |
| 103. | ಐ. ಕೆ. ಸುದರ್ಶನ್ ಪ್ರಸಾದ್, ಪಡುಬಿದ್ರೆ | 1,00,000/– |
| 104. | ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್ | 1,18,005/– |

(ಮುಂದುವರಿಯುವುದು....)

**ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.**

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.

**ವಾಗೀಶ ಎಸ್. ಶಾಸ್ತ್ರೀ**, ಧರ್ಮಾಧಿಕಾರಿ, ಉಡುಪಿ (9449591513)
ವನಸುಮ, ಶ್ರೀದುರ್ಗಾದೇವಸ್ಥಾನದ ಹತ್ತಿರ, ಪುತ್ತೂರು ಉಡುಪಿ 576105

# ಶ್ರೀ ಶಾರದಾ ಸೊಸೈಟಿಯ ಬ್ರಹ್ಮಾವರ ಶಾಖೆಯಲ್ಲಿ ಸ್ಥಳೀಯ ಸಮಿತಿ ಸಭೆ





ತಾ.05.09.2023ರಂದು ಶ್ರೀ ಶಾರದಾ ಸೊಸೈಟಿ ಉಡುಪಿಯ ಬ್ರಹ್ಮಾವರ ಶಾಖೆಯಲ್ಲಿ ಸ್ಥಳೀಯ ಸಮಿತಿಯ ಸಭೆಯು ಶ್ರೀ ಶಾರದಾ ಸೊಸೈಟಿ ಅಧ್ಯಕ್ಷರಾದ ಎಂ. ಸದಾನಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಶ್ರೀ ಶಾರದಾ ಸೊಸೈಟಿಯ ನಿರ್ದೇಶಕರು, ಸಲಹೆಗಾರರಾದ ಉದಯ ಬಾರ್ಕೂರು ಕಾರ್ಯದರ್ಶಿ, ಸಿಬಂದಿ ವರ್ಗ ಅಲ್ಲದೆ ಸ್ಥಳೀಯ ಸಮಿತಿಯ ಶಂಭುಶಂಕರ್, ಗುರುರಾಜ್ ರಾವ್, ಭಾಸ್ಕರ ಹೆಬ್ಬಾರ್, ಕೃಷ್ಣಮೂರ್ತಿ ಬಾರ್ಕೂರು ಅಲ್ಲದೆ ಇನ್ನಿತರರು ಭಾಗವಹಿಸಿ ತಮ್ಮ ಅಭಿಪ್ರಾಯ ತಿಳಿಸಿದರು. ಕಾರ್ಯದರ್ಶಿ ಪಟ್ಟಾಭಿರಾಮ್ ಸ್ವಾಗತಿಸುತ್ತಾ ಪ್ರಸ್ತಾವಿಕ ಮಾತನಾಡಿ ಠೇವಣಿ ಹೆಚ್ಚಳ ಹಾಗೂ ಅಭಿವೃದ್ಧಿ ಬಗ್ಗೆ ಮಾತನಾಡಿದರು. ಅಧ್ಯಕ್ಷೀಯ ಭಾಷಣದಲ್ಲಿ ಅಧ್ಯಕ್ಷರು ಸದಸ್ಯತನ ಹೆಚ್ಚಳ ಹಾಗೂ ಠೇವಣಿ ಸಂಗ್ರಹಣೆ, ಉತ್ತಮ ಸಾಲದ ಬಗ್ಗೆ ಮಾತನಾಡಿ ಈ ಸಭೆ ನಡೆಸಲು ಕಾರಣ ಕರ್ತರಾದ ಸ್ಥಳೀಯ ಸಮಿತಿ ಸದಸ್ಯರು, ಸಲಹೆಗಾರರು, ಕಾರ್ಯದರ್ಶಿ, ಶಾಖಾ ಪ್ರಬಂಧಕಿ ಹಾಗೂ ಸಿಬ್ಬಂದಿ ವರ್ಗ ಹಾಗೂ ನಿರ್ದೇಶಕರಿಗೆ ಧನ್ಯವಾದವಿತ್ತರು. ಮುಂದೆ ಬೇರೆ ಶಾಖೆಗಳಲ್ಲಿಯೂ ಸ್ಥಳೀಯ ಸಮಿತಿಯ ಸಭೆ ನಡೆಸುವ ಬಗ್ಗೆ ತಿಳಿಸಿದರು. ಶಾಖಾ ಪ್ರಬಂಧಕಿ ಶ್ರೀಮತಿ ಭಾರತಿಯವರು ಧನ್ಯವಾದವಿತ್ತರು.


**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ಪಾದೆಬೆಟ್ಟು ದೇವಸ್ಥಾನದಲ್ಲಿ "ಲಕ್ಷ ತುಳಸಿ ಅರ್ಚನೆ"



ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀಯವರ ಮಾರ್ಗದರ್ಶನದಲ್ಲಿ ತಾ.17.09.2023 ರವಿವಾರದಂದು "ಲಕ್ಷ ತುಳಸಿ ಅರ್ಚನೆ"ಯು ಸಂಪನ್ನಗೊಂಡಿತು. ಸುಮಾರು ಇನ್ನೂರಕ್ಕೂ ಅಧಿಕ ಸಂಖ್ಯೆಯ ಭಗವದ್ಭಕ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಈ ಕಾರ್ಯಕ್ರಮವು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿ (ರಿ.), ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತರ ಹಾಗೂ ಅರ್ಚಕರ ಪರಿಪಾಲನಾ ಸಭಾ (ರಿ.), ಮಂಗಳೂರು ಮತ್ತು ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇವರ ಸಹಯೋಗದಲ್ಲಿ ನಡೆಯಿತು.



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
**ಹರಿಕೃಷ್ಣ ಡಿಜಿಟಲ್ಸ್**
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016-17ರಿಂದ 2021-22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

## ದಿ। ಗುಂಡುರಾವ್ ಮತ್ತು ಧರ್ಮಪತ್ನಿ ಕಾವೇರಮ್ಮ ಸ್ಮರಣಾರ್ಥ ಮಕ್ಕಳಿಂದ ಶ್ರೀಶಾರದಾ ಮಂಟಪಕ್ಕೆ ದೇಣಿಗೆ



ದಿನಾಂಕ 24.09.2023ರಂದು ನಮ್ಮ ಶ್ರೀ ಶಾರದಾ ಮಂಟಪದ ಮುಖ್ಯ ಸಭಾಂಗಣದ ನವೀಕರಣ ಮತ್ತು ಹವಾನಿಯಂತ್ರಿತ ಅಳವಡಿಕೆಗೆ ಕುಕ್ಕೆಹಳ್ಳಿ ದಿ। ಗುಂಡುರಾವ್ ಮತ್ತು ಧರ್ಮಪತ್ನಿ ಕಾವೇರಮ್ಮ ಅವರ ಸ್ಮರಣಾರ್ಥ ಅವರ ಮಕ್ಕಳಿಂದ ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಕೆ. ಮಂಜುನಾಥ್ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಜೊತೆ ಕಾರ್ಯದರ್ಶಿ ವಿನೋದ್ ಕುಮಾರ್, ನಿರ್ದೇಶಕರಾದ ಪೂರ್ಣಿಮಾ ಪಿ. ರಾವ್, ಉಮೇಶ್ ರಾವ್ ಹಾಗೂ ಶೆಟ್ಟಿಬೆಟ್ಟು ದಿ। ಗುಂಡು ರಾವ್‌ರವರ ಮಕ್ಕಳಾದ ಶ್ರೀಮತಿ ನಳಿನಿ ರಮೇಶ್, ಕೆ.ವಾಸುದೇವ ರಾವ್, ಚಂದ್ರಶೇಖರ ರಾವ್ ಮತ್ತು ಕುಟುಂಬಿಕರು ಉಪಸ್ಥಿತರಿದ್ದರು. ಇವರಿಗೆ ಸಂಘದ ಪರವಾಗಿ ಧನ್ಯವಾದಗಳು.

★★★★ ★★★★

ಇತ್ತೀಚೆಗೆ ಶ್ರೀ ಶಾರದಾ ಮಂಟಪದ ನವೀಕೃತ ಸಭಾಂಗಣಕ್ಕೆ ಸಂಘದ ಮಾಜಿ ನಿರ್ದೇಶಕರಾದ ಉಂಡಾರು ಕೃಷ್ಣಾನಂದ ರಾವ್‌ರವರು ರೂ.25,000/- ದೇಣಿಗೆ ನೀಡಿ ಸಹಕರಿಸಿರುತ್ತಾರೆ. ಇವರಿಗೆ ಸಂಘದ ಪರವಾಗಿ ಧನ್ಯವಾದಗಳು.

## ಶ್ರೀ ಸಿ.ಎಸ್. ರಾಯರಿಗೆ ಸನ್ಮಾನ




ನಮ್ಮ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಪೂರ್ವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಹಾಗೂ ಉಡುಪಿ ಜಿಲ್ಲಾ ಹಿರಿಯ ನಾಗರಿಕರ ಸಂಸ್ಥೆಯ ಮಾಜಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಚಿಟ್ಪಾಡಿ ಸರ್ವೋತ್ತಮ ರಾವ್ (ಸಿ.ಎಸ್. ರಾವ್) ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಸುನಂದ ರಾವ್‌ರವರನ್ನು ಚಿಟ್ಪಾಡಿ ವಲಯ ಬ್ರಾಹ್ಮಣ ಸಭಾವು ದಿನಾಂಕ 17.09.2023 ರಂದು ಶಾಲು ಹೊದಿಸಿ, ಹಾರ ಹಾಕಿ, ಸ್ಮರಣಿಕೆ ಹಾಗೂ ಅಭಿನಂದನಾ ಪತ್ರಗಳನ್ನು ನೀಡಿ ಗೌರವಿಸಿತು. ಅವರು ಪ್ರಸ್ತುತ ನಮ್ಮ ಸಂಘದ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸನ್ಮಾನದಿಂದ ನಮ್ಮ ಸಂಘಕ್ಕೂ ಗೌರವ ಸಂದಂತಾಗಿದೆ. ಅವರಿಗೆ ಅಭಿನಂದನೆಗಳು.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

# ಹೆಚ್ಚುತ್ತಿವೆ ಹೃದಯಾಘಾತಗಳು

**(ಹೃದಯಾಘಾತದ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈ ಬಗ್ಗೆ ಮಾಹಿತಿ ನೀಡುವ ಲೇಖನವಿದು)**



**ಡಾ। ವೈ ಸುದರ್ಶನ ರಾವ್**
**ಇಂಚರ ಸರ್ಜಿಕಲ್ ಕ್ಲಿನಿಕ್, ಉಡುಪಿ (9845136322)**

ಹೃದಯಾಘಾತವು ಕ್ಷಣಮಾತ್ರದಲ್ಲಾದರೂ, ಪೂರಕ ಸನ್ನಿವೇಶವು ಹೃದಯದಲ್ಲಿ ಹಾಗೂ ಅದರ ರಕ್ತನಾಳಗಳಲ್ಲಿ ಹತ್ತು ಹದಿನೈದು ಅಥವಾ ಇಪ್ಪತ್ತು ವರ್ಷಗಳ ಹಿಂದೆಯೇ ಆರಂಭವಾಗಿರುತ್ತದೆ. ಹೃದಯಕ್ಕೆ ಶುದ್ಧರಕ್ತವನ್ನೊಯ್ಯುವ ಕೊರೊನರಿ ಎಂಬ ರಕ್ತನಾಳಗಳ ಒಳಗೋಡೆಗಳಲ್ಲಿ ಕೊಲೆಸ್ಟಿರಾಲ್ ಎಂಬ ಕೊಬ್ಬುಪದಾರ್ಥವು ಮುದ್ದೆ ಮುದ್ದೆಯಾಗಿ ಶೇಖರವಾಗಿ ರಕ್ತನಾಳದ ವ್ಯಾಸ ಕಡಿಮೆಯಾಗುವುದೇ ಹೃದಯಾಘಾತವಾಗಲು ಮುಖ್ಯ ಕಾರಣ. ಈ ಖಾಯಿಲೆಯನ್ನು ಕೊರೊನರಿ ಆರ್ಟರಿ ಡಿಸೀಸ್ ಎನ್ನುತ್ತಾರೆ. ಕೊರೊನರಿ ರಕ್ತನಾಳದ ವ್ಯಾಸವು ಈ ಮುದ್ದೆಗಳಿಂದಾಗಿ 70% ಕಡಿಮೆಯಾದಾಗ ಮಾತ್ರಾ ಹೃದಯಕ್ಕೆ ಅದರ ಪರಿಣಾಮ ಗೋಚರಿಸುತ್ತದೆ. ಕೆಲಸಮಾಡುವಾಗ ಎದೆನೋವು, ಜೊತೆಗೆ ಮೈಬೆವರುವುದು, ತಲೆಸುತ್ತು ಬರುವುದು. ಏದುಸಿರು ಬರುವುದು ಇತ್ಯಾದಿ ಇದರ ಚಿಹ್ನೆಗಳು. ರೂಢಿಯಿರುವ ಕೆಲಸದಲ್ಲಿ ಈ ಚಿಹ್ನೆಗಳು ಗೋಚರಿಸದೆಯೇ ಇರಬಹುದು. ಈ ಚಿಹ್ನೆಗಳುಳ್ಳವರು ತಪಾಸಣೆಗೊಳಗಾಗಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳದಿದ್ದಲ್ಲಿ ಹೃದಯಾಘಾತಕ್ಕೆ ಒಳಗಾಗುವುದು ಖಚಿತ.

ಅಧಿಕ ರಕ್ತದೊತ್ತಡ ಹಾಗು ಮಧುಮೇಹ ಖಾಯಿಲೆ, ತಂಬಾಕು ಹಾಗೂ ಮದ್ಯಸೇವನೆ, ಅತಿಯಾದ ಸಿಹಿ ಹಾಗೂ ಕೊಬ್ಬಿನ ಪದಾರ್ಥ ಮತ್ತು ಉಪ್ಪೇರಿದ ಪದಾರ್ಥಗಳ ಸೇವನೆ ಹಾಗೂ ರಕ್ತದಲ್ಲಿ ಕೊಬ್ಬು ಹೆಚ್ಚು ಇರುವ ಖಾಯಿಲೆಗಳಿದ್ದವರಲ್ಲಿ ಹೃದಯದ ರಕ್ತನಾಳಗಳಲ್ಲಿ ಕೊಲೆಸ್ಟಿರಾಲ್ ಶೇಖರವಾಗುತ್ತದೆ. ವಯಸ್ಸಾದಂತೆ ರಕ್ತನಾಳಗಳೊಳಗೆ ಕೊಲೆಸ್ಟಿರಾಲ್ ಶೇಖರವಾಗುವುದು ಸಹಜ ಪ್ರಕ್ರಿಯೆ. ರಕ್ತನಾಳಗಳೊಳಗೆ ಶೇಖರವಾದ ಕೊಲೆಸ್ಟಿರಾಲ್ ಕ್ಯಾಲ್ಸಿಯಂ ಲವಣವನ್ನು ಆಕರ್ಷಿಸುತ್ತದೆ. ಈ ಕೊಲೆಸ್ಟಿರಾಲ್ ಹಾಗೂ ಕ್ಯಾಲ್ಸಿಯಂ ಲವಣ ಮಿಶ್ರಿತ ಮುದ್ದೆಯನ್ನು ಪ್ಲೇಕ್ ಎನ್ನುತ್ತಾರೆ.

ಕೊಲೆಸ್ಟಿರಾಲ್ ಶೇಖರವಾಗಲು ಕಾರಣವಾದ ಖಾಯಿಲೆಗಳಲ್ಲಿ ಮುಖ್ಯವಾದುದು ಅಧಿಕರಕ್ತದೊತ್ತಡ ಖಾಯಿಲೆ. ಇದು ನಮ್ಮ ದೇಶದಲ್ಲಿ ಸಾಮಾನ್ಯವಾದ ಹಾಗೂ ನಿರ್ಲಕ್ಷಿತ ಖಾಯಿಲೆ. ರಕ್ತದೊತ್ತಡ ಅಳೆಯುವಾಗ ಅದರಲ್ಲಿ ಎರಡು ಮಾಪನಗಳಿವೆ ಒಂದು ಸಿಸ್ಟೋಲಿಕ್ ಎಂದು ಕರೆಯುವ ಮಾಪನ. ಇದು ಹೃದಯವು ತನ್ನೊಳಗಿರುವ ರಕ್ತವನ್ನು ರಕ್ತನಾಳಗಳೊಳಗೆ ಎಷ್ಟು ಶಕ್ತಿ ಹಾಕಿ ನುಗ್ಗಿಸುತ್ತದೆ ಎಂದು ಸೂಚಿಸುತ್ತದೆ. ಇನ್ನೊಂದು ಡಯಸ್ಟೋಲಿಕ್ ಎಂಬ ಮಾಪನ. ಇದು ಹೃದಯವು ರಕ್ತನಾಳದೊಳಗೆ ರಕ್ತವನ್ನು ನುಗ್ಗಿಸುವಾಗ ರಕ್ತನಾಳಗಳು ಎಷ್ಟು ಸುಲಭವಾಗಿ ತಮ್ಮೊಳಗೆ ರಕ್ತವನ್ನು ಹರಿಯಲು ಬಿಡುತ್ತವೆ ಎಂದು ಸೂಚಿಸುತ್ತದೆ. ಡಯಾಸ್ಟೋಲಿಕ್ ಮಾಪನ ಹೆಚ್ಚಿದ್ದರೆ ರಕ್ತನಾಳವು ಪೆಡಸಾಗಿದ್ದು ತನ್ನೊಳಗೆ ರಕ್ತವನ್ನು ನುಗ್ಗಿಸಲು ಪ್ರತಿರೋಧ ವ್ಯಕ್ತಪಡಿಸುತ್ತಿದೆ ಎಂದರ್ಥ. ರಕ್ತನಾಳಗಳು ಪೆಡಸಾಗಲು ಅವುಗಳೊಳಗೆ ಕೊಲೆಸ್ಟಿರಾಲ್ ಜಮೆಯಾಗುವುದು ಮುಖ್ಯ ಕಾರಣ. ಇತರ ಕಾರಣಗಳೂ ಇವೆ. ಅಧಿಕರಕ್ತದೊತ್ತಡ ಖಾಯಿಲೆ ಬರಲು ಅನುವಂಶೀಯತೆ, ಬೊಜ್ಜು ದೇಹ, ಡೊಳ್ಳುಹೊಟ್ಟೆ, ವ್ಯಾಯಾಮರಹಿತ ಜೀವನ, ಮಧುಮೇಹ ಖಾಯಿಲೆ, ತಂಬಾಕು ಸೇವನೆ, ಸದಾಕಾಲ ಮಾನಸಿಕ ಉದ್ವೇಗ ಇರುವುದು ಪ್ರಮುಖ ಕಾರಣಗಳು. ಇನ್ನಿತರ ಕಾರಣಗಳೂ ಇವೆ. ಅದನ್ನು ತಪಾಸಣೆಗಳ ಮೂಲಕ ಪತ್ತೆ ಹಚ್ಚಬಹುದು.

ರಕ್ತದಲ್ಲಿ ಸಕ್ಕರೆಯ ಪ್ರಮಾಣ ನಿಗದಿತ ಮಟ್ಟಕ್ಕಿಂತ ಹೆಚ್ಚಿಗೆ ಇರುವುದನ್ನು ಮಧುಮೇಹ ರೋಗ ಎನ್ನುತ್ತಾರೆ. ಇದು ರಕ್ತ ಪರೀಕ್ಷೆ ಮಾಡಿಸಿದರೆ ತಿಳಿಯುತ್ತದೆ. ರಕ್ತದಲ್ಲಿ ಸಕ್ಕರೆಯ ಪ್ರಮಾಣ ಹೆಚ್ಚಿಗೆ ಆಗಲು ಆರಂಭವಾಗುವ ಹತ್ತು ವರ್ಷಗಳಿಗೂ ಮುನ್ನ ಮಧುಮೇಹ ಖಾಯಿಲೆ ಅಪ್ರಕಟಿತ ಹಂತದಲ್ಲಿ ಇರುತ್ತದೆ. ಮಧುಮೇಹ ಖಾಯಿಲೆಯಿಂದಾಗಿ ಹೃದಯಕ್ಕೆ ರಕ್ತವನ್ನೊಯ್ಯುವ ಕೊರೊನರಿ ರಕ್ತನಾಳಗಳೊಳಗೆ ಕೊಲೆಸ್ಟಿರಾಲ್ ಶೇಖರವಾಗುವ ಪ್ರಕ್ರಿಯೆ ಬೇಗನೆ ಆಗುತ್ತದೆ. ಹೃದಯದ ಕ್ಷಮತೆಯೂ ಕಡಿಮೆಯಾಗುತ್ತದೆ. ಮಧುಮೇಹಿಗಳಿಗೆ ಹೃದಯಾಘಾತವಾದಾಗ ಎದೆನೋವು ಇಲ್ಲದಿರುವುದು ಇನ್ನೊಂದು ವಿಶೇಷತೆ. ಹಾಗಾಗಿ ಹೃದಯಾಘಾತವಾಗಿದ್ದರೂ ನಿರ್ಲಕ್ಷಿಸುವ ಸಾಧ್ಯತೆಗಳು ಹೆಚ್ಚು.

ಸಿಗರೇಟು ಹಾಗೂ ಬೀಡಿ ಸೇವನೆ ಕೊರೊನರಿ ನಾಳಗಳಲ್ಲಿ ಕೊಲೆಸ್ಟಿರಾಲ್ ಜಮೆಯಾಗಲು ಇನ್ನೊಂದು ಮುಖ್ಯ ಕಾರಣ. ಅನುವಂಶೀತೆಯೂ ಸೇರಿದಂತೆ ನಾನಾ ಕಾರಣಗಳಿಂದ ರಕ್ತದಲ್ಲಿ ಕೊಲೆಸ್ಟಿರಾಲ್ ಅಂಶ ಜಾಸ್ತಿ ಇರುವವರಲ್ಲೂ ಈ ಪ್ರಕ್ರಿಯೆ ಬೇಗನೆ ಆಗುತ್ತದೆ . ಈ ರೀತಿ ಹೃದಯದ ರಕ್ತನಾಳಗಳಲ್ಲಿ ಕೊಲೆಸ್ಟಿರಾಲ್ ಜಮೆಯಾಗಲು ಆರಂಭವಾಗಿ ರೋಗಿಗೆ ಅದರ ಚಿಹ್ನೆಗಳು ಗೋಚರವಾಗಲು ಸುಮಾರು ಹತ್ತರಿಂದ ಹದಿನೈದು ಇಪ್ಪತ್ತು ವರುಷಗಳು ಬೇಕಾದೀತು. ರಕ್ತನಾಳಗಳ ವ್ಯಾಸ ಕಡಿಮೆಯಾಗುವುದು ಇಷ್ಟೊಂದು ನಿಧಾನವಾಗಿ ಆಗುವ ಪ್ರಕ್ರಿಯೆಯಾಗಿದ್ದರಿಂದ ಒಮ್ಮೆಲೆ ಹೃದಯಾಘಾತವಾಗಿ ಮರಣ ಸಂಭವಿಸುವುದು ಹೇಗೆ?

ಕೊಲೆಸ್ಟಿರಾಲ್ ಪ್ಲೇಕ್‌ನಿಂದಾಗಿ ಹೃದಯದ ರಕ್ತನಾಳಗಳ ವ್ಯಾಸ ಕಡಿಮೆಯಾಗಿರುವ ಜಾಗವನ್ನು ಸ್ಟಿನೋಟಿಕ್ ಸೆಗ್ಮೆಂಟ್ ಎನ್ನುತ್ತಾರೆ. ಅಗಲ ಕಿರಿದಾದ ಪ್ರದೇಶ ಎಂದರ್ಥ. ಅಗಲ ಕಿರಿದಾದ ನಾಳದಲ್ಲಿ ಹೃದಯವು ರಕ್ತವನ್ನು ನುಗ್ಗಿಸಿದಾಗ ರಕ್ತವು ಅಗಲ ಕಿರಿದಾದ ಪ್ರದೇಶದಿಂದ ಮುಂದಕ್ಕೆ ಜೆಟ್ ರೀತಿಯಲ್ಲಿ ಚಿಮ್ಮುತ್ತದೆ. ಪೈಪಿನ ಮುಖಾಂತರ ನೀರು ಹಾಯಿಸುವಾಗ ಪೈಪಿನ ಬಾಯಿಗೆ ಬೆರಳು ಅಡ್ಡವಿಟ್ಟರೆ ನೀರು ದೂರಕ್ಕೆ ಚಿಮ್ಮುತ್ತದಲ್ಲವೇ ಅದೇ ರೀತಿ. ಹೀಗೆ ರಕ್ತವು ರಭಸದಿಂದ ಚಿಮ್ಮಿದಾಗ ಮುಂದಿರುವ ರಕ್ತನಾಳದ ಒಳಗೋಡೆಗೆ ಘಾಸಿಯಾಗುತ್ತದೆ. ಘಾಸಿಯಾದ ಭಾಗದಲ್ಲಿ ರಕ್ತ ಹೆಪ್ಪುಗಟ್ಟುತ್ತದೆ ಹಾಗೂ ಹೆಪ್ಪುಗಟ್ಟಿದ ರಕ್ತವು ನಾಳವನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟು ಮುಂದಕ್ಕೆ ರಕ್ತಹರಿಯಲು ಬಿಡುವುದಿಲ್ಲ. ಕೆಲವೊಮ್ಮೆ ಈ ರಭಸಕ್ಕೆ ಘಾಸಿಯಾದ ಭಾಗದಲ್ಲಿದ್ದ ಕೊಲೆಸ್ಟಿರಾಲ್ ಪ್ಲೇಕ್ ನ ತುಂಡು ಕಳಚಿ ಹರಿಯುವ ರಕ್ತದೊಂದಿಗೆ ಸಾಗಿ ಅಗಲ ಕಿರಿದಾದ ಇನ್ನೊಂದು ಜಾಗದಲ್ಲಿ ರಕ್ತಪರಿಚಲನೆಗೆ ಅಡ್ಡವಾಗಿ ನಿಂತು ಬಿಡುತ್ತದೆ. ಅಲ್ಲಿಗೆ ಹೃದಯಾಘಾತ ಆದಂತೆಯೇ ಸರಿ.

ವ್ಯಾಯಾಮ ಮಾಡುವಾಗ ಹೃದಯದ ಬಡಿತ ಹೆಚ್ಚಾಗುತ್ತದೆ. ವ್ಯಾಯಾಮ ಮಾಡುತ್ತಿರುವ ದೇಹಕ್ಕೆ ರಕ್ತ ಪೂರೈಸಲು ಹೃದಯ ಹೆಚ್ಚೆಚ್ಚುಬಾರಿ ಸಂಕುಚಿತ ವಿಕಸಿತಗೊಂಡು ರಕ್ತ ಪೂರೈಸುತ್ತದೆ. ಹೃದಯ ವಿಕಸಿತಗೊಂಡಾಗ ಅದರಲ್ಲಿ ರಕ್ತ ತುಂಬುತ್ತದೆ. ಸಂಕುಚಿತಗೊಳ್ಳುವಾಗ ಈ ರಕ್ತವು ನಾಳಗಳೊಳಗೆ ನುಗ್ಗುತ್ತದೆ. ಹೃದಯದ ಬಡಿತ ಹೆಚ್ಚಾದಂತೆ ವಿಕಸನಗೊಳ್ಳುವ ಸಮಯ ಕಡಿಮೆಯಾಗುತ್ತದೆ. ಇದರಿಂದಾಗಿ ಹೃದಯದೊಳಗೆ ತುಂಬುವ ರಕ್ತ ಕಡಿಮೆಯಾಗುತ್ತದೆ. ಹೃದಯದ ಬಡಿತ ಹೆಚ್ಚಾದಂತೆ ಅದು ರಕ್ತನಾಳಗಳೊಳಗೆ ನುಗ್ಗಿಸುವ ರಕ್ತದ ಪ್ರಮಾಣ ಕಡಿಮೆ ಆಗುತ್ತಾ ಬರುತ್ತದೆ. ವ್ಯಾಯಮ ಮಾಡುವಾಗ ದೇಹಕ್ಕೆ ಹೆಚ್ಚು ರಕ್ತ ಬೇಕಾಗುವಂತೆಯೇ , ಅತೀ ವೇಗದಲ್ಲಿ ಕೆಲಸ ಮಾಡುತ್ತಿರುವ ಹೃದಯಕ್ಕೂ ಶಕ್ತಿಯನ್ನು ಪೂರೈಸಲು ಹೆಚ್ಚು ರಕ್ತ ಬೇಕಾಗಿರುತ್ತದೆ. ಹೃದಯಕ್ಕೆ ಸರಬರಾಜು ಮಾಡುವ ರಕ್ತನಾಳಗಳ ವ್ಯಾಸ ಕಡಿಮೆಯಾಗಿದ್ದಲ್ಲಿ ಆ ರಕ್ತನಾಳಗಳೊಳಗೆ ಪ್ರವೇಶಿಸುವ ರಕ್ತ ಕಡಿಮೆಯಾಗುತ್ತದೆ. ಹೃದಯ ಬಡಿತದ ವೇಗ, ಹೃದಯದಲ್ಲಿ ತುಂಬುವ ರಕ್ತದ ಪ್ರಮಾಣ ಹಾಗೂ ಸ್ವತ: ಹೃದಯಕ್ಕೇ ಪೂರೈಕೆಯಾಗುತ್ತಿರುವ ರಕ್ತದ ಪ್ರಮಾಣ ಈ ಮೂರರ ಹೊಂದಾಣಿಕೆ ತಪ್ಪಿದರೆ ಹೃದಯಾಘಾತವಾಗುತ್ತದೆ. ಒಂದು ವೇಳೆ ರಕ್ತನಾಳಗಳ ವ್ಯಾಸ ಸರಿಯಾಗಿಯೇ ಇದ್ದರೂ ಕೂಡ ಹೃದಯದ ಬಡಿತ ಮಿತಿ ಮೀರಿದರೆ ಹೃದಯವು ಪಂಪ್ ಮಾಡುವ ರಕ್ತದ ಪ್ರಮಾಣ ಅತೀ ಕಡಿಮೆಯಾಗಿ ಕೂಡಾ ಹೃದಯಾಘಾತ ಸಂಭವಿಸಬಹುದು. ವ್ಯಾಯಾಮ ಮಾತ್ರವಲ್ಲದೆ ಹೃದಯ ಬಡಿತ ಹೆಚ್ಚಿಸುವ ಜ್ವರ, ವಾಂತಿಬೇಧಿ ಇತ್ಯಾದಿ ಖಾಯಿಲೆಗಳಲ್ಲೂ ಇದೇ ಪರಿಣಾಮದಿಂದ ಹೃದಯಾಘಾತ ಸಂಭವಿಸಬಹುದು. ವಾಂತಿ ಭೇದಿಯಲ್ಲಿ ರಕ್ತದಲ್ಲಿ ನೀರಿನಂಶ ಕಡಿಮೆಯಾಗಿ ರಕ್ತದ ಸಾಂದ್ರತೆ ಹೆಚ್ಚಾಗುತ್ತದೆ. ಇಂತಹಾ ಸಂದರ್ಭದಲ್ಲೂ ಅಗಲ ಕಿರಿದಾದ ಹೃದಯದ ರಕ್ತನಾಳಗಳಲ್ಲಿ ಪ್ರವೇಶಿಸುವ ರಕ್ತ ಕಡಿಮೆಯಾಗಿ ಹೃದಯಾಘಾತ ಸಂಭವಿಸಬಹುದು.

ಹೃದಯಾಘಾತದ ಬಗ್ಗೆ ಇಷ್ಟು ವಿಷಯಗಳನ್ನು ತಿಳಿದ ಮೇಲೆ ಭಾರತದಲ್ಲಿ ಹೃದಯಾಘಾತ ಯಾಕೆ ಹೆಚ್ಚಾಗುತ್ತಿದೆ ಎಂದು ವಿಶ್ಲೇಷಿಸುವುದು ಸುಲಭ

1) ಅನುವಂಶೀಯವಾಗಿ ನಾವು ಹೃದಯಾಘಾತಕ್ಕೆ ಈಡಾಗುವ ಸಾಧ್ಯತೆ ಜಾಸ್ತಿ ಇದೆ 2) ಡೊಳ್ಳು ಹೊಟ್ಟೆಯ ಮೈಕಟ್ಟಿನವರಾದ ನಮ್ಮಲ್ಲಿ ಅದರಲ್ಲೂ ದಕ್ಷಿಣ ಭಾರತದವರಲ್ಲಿ ಕೊಲೆಸ್ಟಿರಾಲ್ ಜಮೆಯಾಗುವುದು ಜಾಸ್ತಿ 3) ನಮಗೆ ಅಧಿಕ ರಕ್ತದೊತ್ತಡ, ಮಧುಮೇಹ, ರಕ್ತದಲ್ಲಿ ಕೊಬ್ಬಿನಂಶ ಹೆಚ್ಚು ಇರುವ ಖಾಯಿಲೆಗಳು ಬರುವ ಸಾಧ್ಯತೆ ಅನುವಂಶೀಯವಾಗಿ ಜಾಸ್ತಿ ಇದೆ . ಈ ಖಾಯಿಲೆ ಇದೆ ಎಂದು ಗೊತ್ತಿಲ್ಲದವರ, ಗೊತ್ತಿದ್ದೂ ಚಿಕಿತ್ಸೆ ಪಡೆಯದಿರುವವರ ಹಾಗೂ ನಾಮಕಾವಾಸ್ತೆ ಚಿಕಿತ್ಸೆ ಪಡೆಯುವವರ ಸಂಖ್ಯೆಯು ಜಾಸ್ತಿ ಇದೆ. ಹೆಚ್ಚಿನವರು. ಅದು ಹೃದ್ರೋಗವನ್ನು ತಂದಿಕ್ಕಿದ ನಂತರವೇ ಚಿಕಿತ್ಸೆಯನ್ನು ಆರಂಭಿಸುತ್ತಾರೆ. 4) ತಂಬಾಕು ಸೇವನೆ, ಮದ್ಯಪಾನ ಜೊತೆಗೆ ಮಾದಕ ಪದಾರ್ಥದ ಪಿಡುಗು ಹೆಚ್ಚುತ್ತಿದೆ 5) ದೈಹಿಕ ಚಟುವಟಿಕೆ ಕಡಿಮೆ ಇರುವ ಜೀವನಶೈಲಿ ಹೆಚ್ಚುತ್ತಿದೆ. ಸಿಹಿ, ಹಣ್ಣುಗಳು , ಕೊಬ್ಬುಹಾಗೂ ಉಪ್ಪೇರಿದ ಪದಾರ್ಥಗಳ ಸೇವನೆ ಹೆಚ್ಚುತ್ತಿದೆ. 6) ಭಾರತೀಯರ ಜೀವನಶೈಲಿಯು ಧಾವಂತದ ಹಾಗೂ ಯಾಂತ್ರೀಕೃತ ಜೀವನಶೈಲಿಯತ್ತ ವೇಗವಾಗಿ ಬದಲಾವಣೆಯಾಗುತ್ತಿದ್ದು ಅಸಹನೆ, ಅವಸರ, ಅಸೂಯೆ, ಅತೃಪ್ತಿ, ಅತ್ಯಪೇಕ್ಷೆ, ಅನಿಶ್ಚಿತತೆಗಳಿಂದ ಕೂಡಿದ ಮನೋಭಾವ ಹೆಚ್ಚುತ್ತಿದೆ. ತನ್ಮೂಲಕ ಮಾನಸಿಕ ದುಗುಡ, ಕಳವಳ ಹಾಗೂ ಒತ್ತಡಗಳು ಹೆಚ್ಚುತ್ತಿರುವುದು. 7) ಗೂಗಲ್‌ನಲ್ಲಿ ಓದಿ ಸ್ವಯಂ ಚಿಕಿತ್ಸೆ ಮಾಡಿಕೊಳ್ಳುವವರ ಸಂಖ್ಯೆಯಲ್ಲಿ ಹೆಚ್ಚಳ. ವೈದ್ಯರ ಸಲಹೆ ಪಡೆಯಲು ಕೇವಲ ಅರ್ಧ ದಿನ ತಡವಾದರೂ ಹೃದಯಾಘಾತವಾಗಿದ್ದಲ್ಲಿ ಮರಣ ಸಂಭವಿಸಬಹುದು. 8) ವೈದ್ಯರ ಬಗ್ಗೆ, ಹೃದ್ರೋಗ ಪತ್ತೆಹಚ್ಚುವ ಪರೀಕ್ಷಾ ಕ್ರಮಗಳಾದ ಅಂಜಿಯೋಗ್ರಾಂ ಇತ್ಯಾದಿಗಳ ಬಗ್ಗೆ, ಅಂಜಿಯೋಪ್ಲಾಸ್ಟಿ ಹಾಗೂ ಬೈಪಾಸ್ ಶಸ್ತ್ರಚಿಕಿತ್ಸೆಯ ಬಗೆಗಿನ ಅಪಪ್ರಚಾರಗಳಿಗೆ ಕಿವಿಗೊಟ್ಟು ತಮ್ಮಲ್ಲಿರುವ ಹೃದ್ರೋಗದ ಚಿಹ್ನೆಗಳನ್ನು ನಿರ್ಲಕ್ಷಿಸಿರುವುದು, ಸಾಬೀತಾಗದ ಚಿಕಿತ್ಸಾಕ್ರಮಗಳನ್ನು ಉಪಯೋಗಿಸುವುದು. 9) ಅಧಿಕ ರಕ್ತದೊತ್ತಡ , ಮಧುಮೇಹದಂತಹಾ ಮುಖ್ಯ ಖಾಯಿಲೆಗಳಿಗೆ ಕಳಪೆ ಔಷಧಗಳ ಬಳಕೆ 10) ಹೃದಯದ ಚಿಹ್ನೆಗಳನ್ನು ಗ್ಯಾಸ್ ಟ್ರಬಲ್ ಎಂದಿತ್ಯಾದಿಯಾಗಿ ನಿರ್ಲಕ್ಷಿಸಿ ಸಮಯ ವ್ಯರ್ಥ ಮಾಡುವುದು

ಹೃದಯಾಘಾತವಾದ ಗಳಿಗೆಯಿಂದ ಹಿಡಿದು ಸರಿಯಾದ ಚಿಕಿತ್ಸೆ ಸಿಗುವ ತನಕದ ಸಮಯ ಅತ್ಯಮೂಲ್ಯ. ಈ ಸಮಯವನ್ನು ಹಿಗ್ಗಿಸಲು ಸಾಧ್ಯವಿಲ್ಲ. ಹೃದಯಾಘಾತದ ಲಕ್ಷಣಗಳು ತೋರಿದ ಗಳಿಗೆಯಿಂದಲೇ ರೋಗಿಯು ಮಲಗಿ ಸಂಪೂರ್ಣ ವಿಶ್ರಾಂತಿಯನ್ನು ಪಡೆಯಬೇಕು. ಆತನನ್ನು ಸ್ಟ್ರೆಚರ್ ಅಥವಾ ವೀಲ್‌ಚೇರ್ ಮುಖಾಂತರವೇ ನೇರವಾಗಿ ಹೃದಯಾಘಾತದ ಚಿಕಿತ್ಸೆ ಲಭ್ಯವುಳ್ಳ ಆಸ್ಪತ್ರೆಯ ತುರ್ತುಚಿಕಿತ್ಸಾ ವಿಭಾಗಕ್ಕೇ ಒಯ್ದು ಇಸಿಜಿ ಇತ್ಯಾದಿ ಪರೀಕ್ಷೆಗಳನ್ನು ಮಾಡಿಸಿ ಚಿಕಿತ್ಸೆಯನ್ನು ತಕ್ಷಣವೇ ಆರಂಭಿಸಬೇಕು. ಈ ರೀತಿ ತಕ್ಷಣವೇ ತಪಾಸಣೆ ಹಾಗೂ ಚಿಕಿತ್ಸೆಗೊಳಗಾಗುವರ ಹಾಗೂ ಸಕಾಲದಲ್ಲಿ ಚಿಕಿತ್ಸೆ ಸಿಗುವವರ ಸಂಖ್ಯೆ ಎಷ್ಟಿದೆ?

ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಹೆಚ್ಚಿರುವ ಜನಸಂಖ್ಯೆ, ಅಧಿಕ ರಕ್ತದೊತ್ತಡ, ಮಧುಮೇಹ ಇತ್ಯಾದಿ ರೋಗಿಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ, ಬದಲಾಗಿರುವ ಜೀವನಶೈಲಿ ಹಾಗೂ ಆಹಾರ ಕ್ರಮ ಇವೆಲ್ಲದರ ಪರಿಣಾಮವು ಹೆಚ್ಚುತ್ತಿರುವ ಹೃದಯಾಘಾತದ ರೂಪದಲ್ಲಿ ನಮಗೆ ಈಗ ಗೋಚರಿಸುತ್ತಿದೆ. ಕೊರೊನಾ ಲಾಕ್‌ಡೌನ್ ಹಾಗೂ ವರ್ಕ್‌ಫ್ರಂ ಹೋಂಗಳಿಂದಾಗಿ ದೈಹಿಕ ಚಟುವಟಿಕೆಯು ಎರಡು ವರ್ಷಗಳ ಕಾಲ ಕಡಿಮೆಯಿದ್ದಿದ್ದೂ ಈ ಪ್ರಕ್ರಿಯೆಗೆ ವೇಗ ಒದಗಿಸಿರುತ್ತದೆ. ಕೊರೊನಾನಂತರ ಗರಿಗೆದರಿರುವ ಆರ್ಥಿಕ ಚಟುವಟಿಕೆಗಳು ಜನರ ಮಾನಸಿಕ ಒತ್ತಡ ಹೆಚ್ಚಿಸಿರುವುದೂ ಪೂರಕವಾಗಿರಬಹುದು. ಅನೇಕ ಮಂದಿ ವೈದ್ಯರಲ್ಲಿಗೆ ಕಳೆದೆರಡು ವರ್ಷಗಳಿಂದ ತಪಾಸಣೆಗೇ ಹೋಗಿಲ್ಲ. ಇಂತವರಲ್ಲಿ ಹೃದಯದ ಖಾಯಿಲೆ ಬೆಳೆದಿರುವುದು ತಿಳಿದಿರುವುದಾದರೂ ಹೇಗೆ? ಹೀಗೆಯೇ ಮುಂದುವರಿದರೆ ಹೃದಯಾಘಾತದ ಸರಣಿಯೂ ಮುಂದುವರಿಯುವುದರಲ್ಲಿ ಅನುಮಾನವಿಲ್ಲ. ಈ ಸಮಸ್ಯೆಗೆ ಸಾರ್ವತ್ರಿಕವಾಗಿ ಎಲ್ಲರೂ ಅಧಿಕ ರಕ್ತದೊತ್ತಡ, ಮಧುಮೇಹ ಹಾಗೂ ರಕ್ತದ ಕೊಬ್ಬಿನ ಮಟ್ಟದ ಪರೀಕ್ಷೆಯನ್ನು ಹಾಗೂ ವೈದ್ಯರು ಅಗತ್ಯವೆಂದು ಅಭಿಪ್ರಾಯಪಟ್ಟಲ್ಲಿ ಹೃದಯದ ಪರೀಕ್ಷೆಯನ್ನೂ ತಪ್ಪದೆ ಮಾಡಿಸಿಕೊಳ್ಳುವುದೇ ಏಕೈಕ ಉಪಾಯ. ತೊಂದರೆಯುಳ್ಳವರು ಚಿಕಿತ್ಸೆಯನ್ನೂ ಪ್ರಾಮಾಣಿಕವಾಗಿ ಮಾಡಬೇಕು. ಆರೋಗ್ಯಕ್ಕೆ ಪೂರಕವಾದ ಆಹಾರ, ವ್ಯಾಯಾಮ ಮತ್ತು ಜೀವನಶೈಲಿಯನ್ನು ರೂಢಿಸಿಕೊಳ್ಳುವುದೂ ಅಷ್ಟೇ ಅವಶ್ಯ.

# ಯಕ್ಷಲೋಕದ ಪ್ರತಿಭೆ – ಸ್ಫೂರ್ತಿ ಶ್ಯಾನುಭೋಗ್




ಮೊದಲ ನೋಟಕ್ಕೆ ಎಲ್ಲರನ್ನೂ ಸೆಳೆಯುವ ಹಾಗೂ ಸ್ತ್ರೀ ಮತ್ತು ಪುರುಷ ಪಾತ್ರಕ್ಕೆ ಹೊಂದುವ ಸುಂದರ ಮುಖಭಾವದ ಈ ಯುವಕ ಎಳವೆಯಲ್ಲಿಯೇ ಯಕ್ಷಗಾನ ರಂಗವೇರಿ, ಇಂದು ಈ ರಂಗದಲ್ಲಿ ಸ್ತ್ರೀ ಮತ್ತು ಪುರುಷ ಪಾತ್ರಗಳಲ್ಲಿ ಮಿಂಚುತ್ತಾ, ಬೆಳೆಯುತ್ತಿದ್ದಾರೆ. ಅವರೇ ಮಂದಾರ್ತಿ ಸಮೀಪದ ತಂತ್ರಾಡಿ ದಿ। ವಿಷ್ಣುಮೂರ್ತಿ ಶ್ಯಾನುಭೋಗ್ ಮತ್ತು ಮಹಾಲಕ್ಷ್ಮೀ ದಂಪತಿಯ ಪುತ್ರ ಸ್ಫೂರ್ತಿ ಶ್ಯಾನುಭೋಗ್.

ಮನೆಯಲ್ಲಿ ಯಕ್ಷಗಾನದ ವಾತಾವರಣ ಇಲ್ಲದಿದ್ದರೂ, ತಂದೆಯವರು ಅಪರೂಪಕ್ಕೊಮ್ಮೆ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಇದು ಬಾಲಕನ ಸ್ಫೂರ್ತಿಗೆ ಪ್ರೇರಣೆ ನೀಡಿತು. ಯಕ್ಷಗಾನ ಕಾರ್ಯಕ್ರಮಗಳಿಗೆ ಹೋದಾಗಲೆಲ್ಲ ಚೌಕಿಯಲ್ಲಿನ ವೇಷಭೂಷಣ ಮತ್ತು ಆಯುಧಗಳನ್ನು ಕಂಡು ತನಗೆ ಬೇಕೆಂದು ರಚ್ಚೆ ಹಿಡಿಯುತ್ತಿದ್ದ ಈ ಬಾಲಕನನ್ನು ಗಮನಿಸಿದ ಮಂದಾರ್ತಿ ಮೇಳದ ಕಲಾವಿದ ಅಣ್ಣಪ್ಪ ಶಿರೂರು ಅವರು ಪ್ರೋತ್ಸಾಹಿಸಿ, ತರಬೇತಿ ನೀಡಿದರು. ಇದೇ ಮೇಳದ ಬಯಲಾಟವೊಂದರಲ್ಲಿ ಪುಟ್ಟ ಪಾತ್ರ ನೀಡಿ ಅವಕಾಶ ಕೊಟ್ಟರು.

ಗುರುಗಳಾದ ಹಳ್ಳಾಡಿ ಸುಬ್ರಾಯ ಮಲ್ಯ ಅವರಲ್ಲಿ ತರಬೇತಿ ಪಡೆಯುತ್ತಾ, ಶಾಲಾ ಯಕ್ಷಗಾನ ಕಾರ್ಯಕ್ರಮಗಳಲ್ಲಿ ಬಾಲಗೋಪಾಲ ಪಾತ್ರಗಳನ್ನು ಮಾಡುತ್ತಾ ಬೆಳೆದರು. ನಂತರ ತಂತ್ರಾಡಿಯ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಕಲಾರಂಗ ಮಕ್ಕಳ ಮೇಳಕ್ಕೆ ಸೇರಿದಾಗ, ಅಲ್ಲಿ ಖ್ಯಾತ ಕಲಾವಿದ ಹಿರಿಯಣ್ಣ ಶೆಟ್ಟಿಗಾರ್ ಗುರುಗಳಾಗಿ ದೊರಕಿದರು. ಹೀಗೆ ಕಾಲೇಜು ದಿನಗಳಲ್ಲೂ ಬಹಳಷ್ಟು ಯಕ್ಷಗಾನಗಳಲ್ಲಿ ಪಾತ್ರಗಳನ್ನು ನಿರ್ವಹಿಸಿ ಎಲ್ಲರ ಗಮನ ಸೆಳೆದರು.

ಈ ನಡುವೆ ತಂದೆಯವರ ಅಕಾಲಿಕ ಮರಣದಿಂದ ಶಿಕ್ಷಣಕ್ಕೆ ಆರ್ಥಿಕವಾಗಿ ತೊಡಕಾದಾಗ, ಜನ್ನಾಡಿಯ ಶ್ರೀ ಗಣೇಶ ಬಳೆಗಾರರ ಯಕ್ಷಗಾನ ಪ್ರಸಾಧನ ತಂಡದೊಂದಿಗೆ ಸೇರಿ ಶಿಕ್ಷಣಕ್ಕೆ ಹಣ ಹೊಂದಿಸಿಕೊಂಡರು. ಈ ಸಂದರ್ಭದಲ್ಲಿ ಬಹಳಷ್ಟು ಖ್ಯಾತ ಕಲಾವಿದರ ಪರಿಚಯವಾಗಿ ಅವರೊಂದಿಗೂ ಪಾತ್ರಗಳನ್ನು ನಿರ್ವಹಿಸುವುದು ನಿರಂತರವಾಗಿ ಸಾಗಿತು. ಹೀಗೆ ಯಾವುದೇ ಚಿಕ್ಕ ಪುಟ್ಟ ಪಾತ್ರಗಳೆನ್ನದೇ ಎಲ್ಲವನ್ನೂ ಸಮಚಿತ್ತದಿಂದ ಸವಾಲಾಗಿ ಸ್ವೀಕರಿಸಿದರು.

ಕಲಾವಿದ ಪ್ರಶಾಂತ್ ಗಾಣಿಗ ನೈಲಾಡಿ ಅವರು ಮತ್ತಷ್ಟು ಅವಕಾಶಗಳನ್ನು ನೀಡಿ ಪ್ರೋತ್ಸಾಹಿಸಿದರು. ಶ್ರೀ ಹಟ್ಟಿಯಂಗಡಿ ಮೇಳದಲ್ಲೂ ಅವಕಾಶಗಳನ್ನು ಕೊಡಿಸಿದರು. ಇಲ್ಲಿಯೂ ಯಕ್ಷಗಾನದ ಹಲವು ವಿಷಯಗಳನ್ನು ಹಠದಿಂದ ಕಲಿತರು. ಮುಂದೆ ಸ್ತ್ರೀ ಪಾತ್ರಗಳಿಗೆ ಹೆಚ್ಚಿನ ಅವಕಾಶ ಬಂದಾಗ, ಸ್ತ್ರೀ ವೇಷಧಾರಿಗಳಿಂದ ಹೆಚ್ಚಿನ ಅನುಭವಗಳಿಸಿದರು. ಮನೆ ಬಿಟ್ಟು ದೂರ ಹೋಗಲಾಗದ ಪರಿಸ್ಥಿತಿಯಿಂದ ಬಹಳಷ್ಟು ಅವಕಾಶಗಳಿಂದ ವಂಚಿತರಾದರು. ಆದರೂ ಹಿರಿಯಣ್ಣ ಶೆಟ್ಟಿಗಾರರ 'ಕಿತ್ತೂರು ಚೆನ್ನಮ್ಮ' ಹದಿನೈದು ಜಿಲ್ಲೆಗಳಲ್ಲಿ ಪ್ರದರ್ಶನಗೊಂಡಿದ್ದರಿಂದ ಹೊರ ಜಿಲ್ಲೆಗಳಲ್ಲಿ ತನ್ನ ಪ್ರತಿಭೆಗೆ ಅವಕಾಶ ದೊರಕಿದ್ದು ಖುಷಿ ನೀಡಿತು.

ಹಾಗೆಯೇ ಖ್ಯಾತ ಕಲಾವಿದೆ ಅಶ್ವಿನಿ ಕೊಂಡದಕುಳಿ ಅವರ ತಂಡದೊಂದಿಗೆ ಮುಂಬೈನ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವೂ ಒದಗಿ ಬಂದಿತು. ಇದುವರೆಗೆ ನೂರಾರು ಪಾತ್ರಗಳನ್ನು ನಿರ್ವಹಿಸಿದ್ದು, ಅದರಲ್ಲಿ ದಕ್ಷ, ಈಶ್ವರ, ರಾಮ, ಹನುಮಂತ, ಕೃಷ್ಣ, ಬಲರಾಮ, ಚಂದ್ರಹಾಸ, ಕೌರವ, ಸಂಜಯ, ದೇವೇಂದ್ರ, ದ್ರೋಣ, ಭೀಮ, ಕುಶ, ಲವ, ಶತ್ರುಘ್ನ, ಬ್ರಹ್ಮ, ವಿಷ್ಣು, ಮಧು–ಕೈಟಭ, ಸುದರ್ಶನ ಹೀಗೆ ಇನ್ನೂ ಅನೇಕ ಪುರುಷ ಪಾತ್ರಗಳಾದರೆ, ದಾಕ್ಷಾಯಿಣಿ, ಅಂಬೆ, ಮದನಾಕ್ಷಿ, ತಾರಾವಳಿ, ಮೀನಾಕ್ಷಿ, ಸುಭದ್ರೆ, ವತ್ಸಲೆ, ವಿಷಯೆ, ಸೀತೆ, ಮಾಲಿನಿ, ಸತ್ಯಭಾಮ, ರುಕ್ಮಿಣಿ, ಶ್ರೀದೇವಿ, ಭ್ರಮರಕುಂತಳೆ, ಶಶಿಪ್ರಭೆ, ಶಾರದೆ ಇತ್ಯಾದಿ ಸ್ತ್ರೀ ಪಾತ್ರಗಳನ್ನು ಸೊಗಸಾಗಿ ನಿರ್ವಹಿಸಿ ಯಕ್ಷಪ್ರೇಮಿಗಳ ಮೆಚ್ಚುಗೆಗೆ ಪಾತ್ರರಾದರು. ಸಾವಿರಕ್ಕೂ ಮಿಕ್ಕಿದ ಪ್ರದರ್ಶನಗಳಲ್ಲಿ ಪಾತ್ರಗಳನ್ನು ನಿರ್ವಹಿಸಿರುವುದು ಮೆಚ್ಚುಗೆಯ ವಿಷಯ.

ತಂತ್ರಾಡಿ ಮಕ್ಕಳ ಮೇಳದ ಉತ್ತಮ ವಿದ್ಯಾರ್ಥಿ ಪ್ರಶಸ್ತಿ, ವಿವಿಧ ಸಂಘ ಸಂಸ್ಥೆಗಳ ಸನ್ಮಾನ ಸಹಿತ ಬೆಂಗಳೂರಿನ ಜ್ಞಾನ ಮಂದಾರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನವರು ಕರ್ನಾಟಕ ಚೇತನ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

'ಯಕ್ಷಗಾನ ಶಿಷ್ಟ ಸಾಹಿತ್ಯದ ಕಲೆ. ಇದು ವ್ಯಕ್ತಿಯೊಬ್ಬನ ಸರ್ವತೋಮುಖ ಬೆಳವಣಿಗೆಯಲ್ಲಿ ಸಹಕಾರಿ. ಅಗಾಧವಾದ ಪುರಾಣ ಜ್ಞಾನ, ಕತೆಗಳ ಅನುಭವದಿಂದಲೇ ಎಂತಹ ವ್ಯಕ್ತಿಯನ್ನೂ ಸಮಾಜದ ಉತ್ತಮ ಸಂಪತ್ತನ್ನಾಗಿ ಬೆಳೆಸುವ ಶಕ್ತಿ ಪಡೆದಿದೆ. ಹಾಗಾಗಿ ಈ ಕಲೆಯನ್ನು ಎಲ್ಲರೂ ಸೇರಿ ಉಳಿಸಿ ಬೆಳೆಸಬೇಕಾಗಿದೆ' ಎನ್ನುತ್ತಾರೆ ಸ್ಫೂರ್ತಿ.

ಸ್ನಾತಕೋತ್ತರ ಪದವೀಧರರಾದ ಇವರು ಪ್ರಸ್ತುತ ಕರ್ನಾಟಕ ಸಾರಿಗೆ ನಿಗಮ ಉಡುಪಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ಹಲವಾರು ಕಡೆಗಳಲ್ಲಿ ಹವ್ಯಾಸಿ ಕಲಾವಿದರಾಗಿ ಪಾತ್ರ ನಿರ್ವಹಿಸುತ್ತಿದ್ದಾರೆ.

---

ಶ್ರೀ ಶಂಕರಾಚಾರ್ಯರ ಕುರಿತಾದ ಕೆಲವು ಸ್ತೋತ್ರಗಳು

**ವಿಜಯದಶಮಿ ಕಂಠಪಾಠಕ್ಕೆ**

## ಗುರ್ವಷ್ಟಕಂ

ವಿದಿತಾಖಿಲಶಾಸ್ತ್ರಸುಧಾಜಲಧೇ
ಮಹಿತೋಪನಿಷತ್ಕಥಿತಾರ್ಥನಿಧೇ ।
ಹೃದಯೇ ಕಲಯೇ ವಿಮಲಂ ಚರಣಂ
ಭವ ಶಂಕರದೇಶಿಕ ಮೇ ಶರಣಂ ॥೧॥

ಕರುಣಾವರುಣಾಲಯ ಪಾಲಯ ಮಾಂ
ಭವಸಾಗರದುಃಖವಿದೂನಹೃದಂ ।
ರಚಿತಾಖಿಲದರ್ಶನತತ್ತ್ವವಿದಂ
ಭವ ಶಂಕರದೇಶಿಕ ಮೇ ಶರಣಂ ॥೨॥

ಸುಕೃತೇಧಿಕೃತೇ ಬಹುಧಾ ಭವತೋ
ಭವಿತಾಪದದರ್ಶನಲಾಲಸತಾ ।
ಅತಿದೀನಮಿಮಂ ಪರಿಪಾಲಯ ಮಾಂ
ಭವ ಶಂಕರದೇಶಿಕ ಮೇ ಶರಣಂ ॥೩॥

ಭವ ಏವ ಭವಾನಿತಿ ಮೇ ನಿತರಾಂ
ಸಮಜಾಯತ ಚೇತಸಿ ಕೌತುಕಿತಾ ।
ಮಮ ವಾರಯ ಮೋಹಮಹಾಜಲಧಿಂ
ಭವ ಶಂಕರದೇಶಿಕ ಮೇ ಶರಣಂ ॥೪॥

ಭವತಾ ಜನತಾ ಸುಹಿತಾ ಭವಿತಾ
ನಿಜಬೋಧವಿಚಾರಣಚಾರುಮತೇ ।
ಕಲಯೇಶ್ವರಜೀವವಿವೇಕಭಿದಂ
ಭವ ಶಂಕರದೇಶಿಕ ಮೇ ಶರಣಂ ॥೫॥

ಜಗತೀಮವಿತುಂ ಕಲಿತಾಕೃತಯೋ
ವಿಚರಂತಿ ಮಹಾಮಹಸಶ್ಛಪರಮ್ ।
ಅಹಿಮಾಂಶುರಿವಾತ್ರ ವಿಭಾಸಿ ಗುರೋ
ಭವ ಶಂಕರದೇಶಿಕ ಮೇ ಶರಣಂ ॥೬॥

ಗುರುಪುಂಗವ ಪುಂಗವಕೇತನ ತೇ
ಸಮತಾಮಯತಾಂ ನಹಿ ಕೋಪಿ ಸುಧೀಃ ।
ಶರಣಾಗತವತ್ಸಲ ತತ್ತ್ವನಿಧೇ
ಭವ ಶಂಕರದೇಶಿಕ ಮೇ ಶರಣಂ ॥೭॥

ವಿದಿತಾ ನ ಮಯಾ ವಿಶದೈಕಕಲಾ
ನ ಚ ಕಿಂಚನ ಕಾಂಚನಮಸ್ತಿಗುರೋ ।
ದ್ರುತಮೇವ ವಿಧೇಹಿ ಕೃಪಾಂ ಸಹಜಾಂ
ಭವ ಶಂಕರದೇಶಿಕ ಮೇ ಶರಣಂ ॥೮॥

---

# 12ನೇ ಹೆಗ್ಗುಂಜೆ ಗ್ರಾಮ ಪಂಚಾಯತ್ ಕೃಷಿ ರತ್ನ ಶ್ರೀ ಕೆ. ಶಂಭುಶಂಕರ ರಾವ್



ಶ್ರೀ ಕೆ. ಶಂಭುಶಂಕರ ರಾವ್‌ರವರು ಮಂದಾರ್ತಿ ಕಲ್ಲುದೇವಸ್ಥಾನದ ಬಳಿಯ ದಿ। ಮಂಜುನಾಥಯ್ಯ ಹಾಗೂ ದಿ। ಲಕ್ಷ್ಮೀ ಅಮ್ಮ ಇವರ ಸುಪುತ್ರರಾಗಿ ದಿನಾಂಕ 11.01.1958ರಲ್ಲಿ ಜನಿಸಿದರು. ಇವರು ಶ್ರೀಮತಿ ಪ್ರಭಾವತಿರವರನ್ನು ಧರ್ಮಪತ್ನಿಯಾಗಿ ಕೈ ಹಿಡಿದಿದು ಶ್ರೀ ವಿನಯ್, ಶ್ರೀ ವಿನೋದ್ ಹಾಗೂ ಶ್ರೀಮತಿ ವಿನುತ ಎಂಬ ಮೂವರು ಮಕ್ಕಳನ್ನು ಪಡೆದು ಸಂತೃಪ್ತ ಜೀವನವನ್ನು ನಡೆಸುತ್ತಿದ್ದಾರೆ.


ಶ್ರೀಯುತರು ತಮ್ಮ ಕೃಷಿ ಜಮೀನಿನಲ್ಲಿ ಭತ್ತ, ದ್ವಿದಳ ಧಾನ್ಯಗಳು, ಅಡಿಕೆ, ಕೊಕ್ಕೊ, ಕಾಳುಮೆಣಸು, ಜಾಯಿಕಾಯಿ, ಅಗರ್‌ವುಡ್, ಮಾವು, ಬಾಳೆ, ಕೊಕಂ, ಸಾಗುವಾನಿ, ಮಹಾಘನಿ ಹಾಗೂ ತರಕಾರಿ ಅಲ್ಲದೆ ಇತರ ಅನೇಕ ಬೆಳೆಗಳನ್ನು ಬೆಳೆದು ಸಮಗ್ರ ಸಾವಯವ ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಇವರು ಮಂಡಲ ಪಂಚಾಯತ್, ಸಹಕಾರಿ ಸಂಘಗಳು, ರೋಟರಿ ಕ್ಲಬ್, ರೈತ ಶಕ್ತಿ ಗುಂಪು, ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಹಾಲು ಉತ್ಪಾದಕರ ಸಂಘ, ಇವುಗಳಲ್ಲಿ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಹಾಗೂ ಸದಸ್ಯರಾಗಿ ಸಕ್ರಿಯ ಸೇವೆ ಸಲ್ಲಿಸಿ ದಾನಿಗಳಾಗಿ ಸಮಾಜ ಸೇವೆಯಲ್ಲಿಯೂ ಸಹ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

ಇವರಿಗೆ ಕೃಷಿ ಕ್ಷೇತ್ರದ ಸಾಧನೆಯ ಬಗ್ಗೆ ಅನೇಕ ಪ್ರಶಸ್ತಿಗಳು ಬಂದಿದ್ದು ಪ್ರಮುಖವಾಗಿ ಕೃಷಿವಿಶ್ವವಿದ್ಯಾಲಯ ಬೆಂಗಳೂರು ಇವರಿಂದ ಕಾರ್ಪ್‌ರೈತ ಪ್ರಶಸ್ತಿ, ಭತ್ತ ಕೃಷಿಯಲ್ಲಿ 2007–08ನೇ ಸಾಲಿನ ಉಡುಪಿ ತಾಲೂಕು ಮಟ್ಟದ ಪ್ರಥಮ ಪ್ರಶಸ್ತಿ. 2009–10ನೇ ಸಾಲಿನ ಉಡುಪಿ ತಾಲೂಕು ಮಟ್ಟದ ಉತ್ತಮ ರೈತ ಪ್ರಶಸ್ತಿ, 2011–12ನೇ ಸಾಲಿನಲ್ಲಿ ಗೇರು ಮತ್ತು ಕೊಕ್ಕೊ ಬೆಳೆ ಬಗ್ಗೆ ಕೊಕ್ಕೊ ನಿರ್ದೇಶನಾಲಯ ಕೊಚ್ಚಿ ಇವರಿಂದ ಉತ್ತಮ ಬೆಳೆಗಾರ ಪ್ರಶಸ್ತಿ, 2012–13ನೇ ಸಾಲಿನಲ್ಲಿ ಕೃಷಿ ಇಲಾಖೆ ವತಿಯಿಂದ ಕೃಷಿ ಅಧ್ಯಯನಕ್ಕೆ ಚೀನಾ ಪ್ರವಾಸ, 2013–14ನೇ ಸಾಲಿನಲ್ಲಿ ಗುಜರಾತ್‌ನಲ್ಲಿ ನಡೆದ ಕೃಷಿ ಸಮ್ಮೇಳನದಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಂದ ಉತ್ತಮ ರೈತ ಪ್ರಶಸ್ತಿ, 2014–15ನೇ ಸಾಲಿನಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, 2016–17ನೇ ಸಾಲಿನಲ್ಲಿ ಕರ್ನಾಟಕ ಸರಕಾರದ ಕೃಷಿ ಪಂಡಿತ ಪ್ರಶಸ್ತಿ, 2018ರಿಂದ ಕರ್ನಾಟಕ ರಾಜ್ಯ ರೈತ ಸಲಹಾ ಸಮಿತಿಯ ಸದಸ್ಯತ್ವ, 2020 ರಲ್ಲಿ ಬೆಂಗಳೂರಿನಲ್ಲಿ ನಡೆದ ವಿಶ್ವ ಸ್ಥಾನಿಕ ಬ್ರಾಹ್ಮಣ ಸಮ್ಮೇಳನದಲ್ಲಿ ಸಾಧನಶೀಲ ರೈತ ಪ್ರಶಸ್ತಿ. 2020ನೇ ಸಾಲಿನಿಂದ ಬ್ರಹ್ಮಾವರ ಕೃಷಿ ವಿಜ್ಞಾನ ಕೇಂದ್ರದ ಸಲಹಾ ಸಮಿತಿಯ ಸದಸ್ಯತ್ವ ಹಾಗೂ ಇನ್ನೂ ಅನೇಕ ಪ್ರಶಸ್ತಿಗಳು ಇವರ ಮುಡಿಗೇರಿದ್ದು ಇದು ನಮ್ಮ ಊರಿಗೆ ಹೆಮ್ಮೆಯ ವಿಷಯ ಆಗಿರುತ್ತದೆ.

ಶ್ರೀಯುತರಿಗೆ ಹೆಗ್ಗುಂಜೆ ಗ್ರಾಮದ "ಕೃಷಿ ರತ್ನ" ಪ್ರಶಸ್ತಿ ಬಂದಿರುವುದು ನಮ್ಮ ಸಮಾಜಕ್ಕೆ ಸಂದ ಗೌರವವಾಗಿರುತ್ತದೆ.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ
ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ,
ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಬೆಳ್ತಂಗಡಿ ಸಂಘದಲ್ಲಿ 'ಆಟ ಸಂಭ್ರಮ ಮತ್ತು ರಕ್ಷಾಬಂಧನ' ಕಾರ್ಯಕ್ರಮ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇಲ್ಲಿ ಆಟ ಸಂಭ್ರಮ ಹಾಗೂ ರಕ್ಷಾಬಂಧನ ಕಾರ್ಯಕ್ರಮವು ಸಪ್ಟೆಂಬರ್ 9 ಹಾಗೂ 10ರಂದು ನಡೆಯಿತು. ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶ್ರೀ ಶಿವಾನಂದ ರಾವ್ ಕಕ್ಕಿನೇಜಿ ಇವರು ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ಕಾರ್ಯದರ್ಶಿಗಳಾದ ಶ್ರೀ ವಿಕಾಸ್ ರಾವ್, ಬೆಳ್ತಂಗಡಿ ವಲಯದ ಅಧ್ಯಕ್ಷರಾದ ಕೃಷ್ಣಕುಮಾರ್, ಉಜಿರೆ ವಲಯದ ಅಧ್ಯಕ್ಷರಾದ ದಿನೇಶ್ ಕುಮಾರ್ ಎಂ ಎಸ್, ಧರ್ಮಸ್ಥಳ ವಲಯದ ಅಧ್ಯಕ್ಷರಾದ ಸೂರ್ಯಾನಂದ ರಾವ್, ಬಂಗಾಡಿ ವಲಯದ ಅಧ್ಯಕ್ಷರಾದ ಉಮೇಶ್ ರಾವ್, ನಾರಾವಿ ವಲಯದ ಕಾರ್ಯದರ್ಶಿಗಳಾದ ಮುರಾರಿ ರಾವ್, ಖಜಾಂಚಿಗಳಾದ ರೇಖಾ ಸುಧೀರ್, ಯುವ ವೇದಿಕೆ ಅಧ್ಯಕ್ಷರಾದ ಹರೀಶ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷರಾದ ಸ್ವಾತಿ ವಿಶ್ವಜಿತ್ ಇವರು ಉಪಸ್ಥಿತರಿದ್ದರು. 5 ವಲಯಗಳ ಅಧ್ಯಕ್ಷರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ದಿನೇಶ್ ಕುಮಾರ್ ಎಂ.ಎಸ್ ಇವರು ಆಟ ಸಂಭ್ರಮ ಮಹತ್ವವನ್ನು ತಿಳಿಸಿದರು. ರಕ್ಷಾ ಬಂಧನ ಕಾರ್ಯಕ್ರಮವನ್ನು ಆಚರಿಸುವುದರ ಉದ್ದೇಶದ ಬಗ್ಗೆ ಶ್ರೀ ಬಿ.ಕೆ. ಧನಂಜಯ್ ರಾವ್ ಮಾತನಾಡಿದರು. ಶ್ರೀಮತಿ ಸುಗುಣ ದೇಶಭಕ್ತಿ ಗೀತೆಯನ್ನು ಹಾಡಿದರು. ನಮ್ಮ ಈ ಹಿಂದಿನ ಮೂರು ಕಾರ್ಯಕ್ರಮಗಳು ಅತ್ಯಂತ ಯಶಸ್ವಿ ಯಾಗಿದೆ ಹಾಗೂ ಈ ಕಾರ್ಯಕ್ರಮವೂ ಕೂಡ ಯಶಸ್ವಿಗೊಳ್ಳುತ್ತದೆ ಎನ್ನುವ ಆಶಯವನ್ನು ಅಧ್ಯಕ್ಷರಾದ ಶ್ರೀ ಶಿವಾನಂದ ರಾವ್ ಇವರು ವ್ಯಕ್ತಪಡಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಸರ್ವರನ್ನು ಕಾರ್ಯದರ್ಶಿಗಳಾದ ಶ್ರೀ ವಿಕಾಸ್ ರಾವ್ ಸ್ವಾಗತಿಸಿದರೆ, ಯುವ ವೇದಿಕೆ ಅಧ್ಯಕ್ಷರಾದ ಶ್ರೀ ಹರೀಶ್ ರಾವ್ ಧನ್ಯವಾದವನ್ನಿತ್ತರು. ಶ್ರೀಮತಿ ನಿಶಾ ವಿಶ್ವನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು. ಆಟ ಸಂಭ್ರಮ ಇದರಲ್ಲಿ ನಮ್ಮ ಸಮಾಜದ ಬಂಧುಗಳಿಗೆ ಸಂಜೆ 5 ರಿಂದ ಆರಂಭಗೊಂಡು ಮರುದಿನ ಬೆಳಿಗ್ಗೆ 5 ರವರೆಗೆ ವಿವಿಧ ರೀತಿಯ ಆಟಗಳನ್ನು ಏರ್ಪಡಿಸಲಾಗಿತ್ತು. ಪ್ರಮುಖವಾಗಿ ಚೆಸ್, ಕ್ಯಾರಂ, ಲೂಡೋ, ಹಾವು-ಏಣಿ, ಲಗೋರಿ, ಸ್ಮರಣಶಕ್ತಿ ಪರೀಕ್ಷೆ, ಅದೃಷ್ಟದ ಆಟ, ಇಸ್ಪೀಟ್ ಹೀಗೆ ವಿವಿಧ ಮನೋರಂಜನಾ ಆಟಗಳು ಇದ್ದವು. ಪ್ರತಿಯೊಂದು ಆಟಗಳಲ್ಲಿಯೂ ಎಲ್ಲಾ ಸದಸ್ಯರು ಅತ್ಯಂತ ಸಂತೋಷದಿಂದ ಭಾಗವಹಿಸಿದ್ದರು. ಆಟಗಳ ಮಧ್ಯದಲ್ಲಿ ವಿವಿಧ ರೀತಿಯ ತಿಂಡಿ ತಿನಿಸುಗಳು ಹಾಗೂ ಪಾನೀಯಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಧರ್ಮಸ್ಥಳ ಹಾಗೂ ಉಜಿರೆ ವಲಯದ ಸದಸ್ಯರು ಉತ್ತಮವಾಗಿ ನೃತ್ಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬ್ರಹ್ಮಾವರ ಇದರ ಅಧ್ಯಕ್ಷರಾಗಿ ಶ್ರೀ ಶಂಭುಶಂಕರ ರಾವ್

ಇತ್ತೀಚಿಗೆ ನಡೆದ ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬ್ರಹ್ಮಾವರ ತಾಲೂಕು ಇದರ ಮಹಾಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಸಹಕಾರಿ ಧುರೀಣ, ಸಾವಯವ ಕೃಷಿಕ, ಮಂದರ್ತಿ ಕಲ್ಲು ದೇವಸ್ಥಾನದ ಶಂಭುಶಂಕರ ರಾವ್‌ರವರು ಆಯ್ಕೆಯಾಗಿದ್ದಾರೆ.

ಮಂಜುನಾಥ ರಾವ್ (ಗೌರವಾಧ್ಯಕ್ಷರು), ಸವಿತಾ ಎರ್ಮಾಳು (ಕಾರ್ಯದರ್ಶಿ), ಉದಯ ಬಾರ್ಕೂರು (ಸಂಚಾಲಕರು), ನೀಲಕಂಠ ರಾವ್ (ಖಜಾಂಚಿ), ರವೀಂದ್ರ ರಾವ್ (ಜತೆ ಕಾರ್ಯದರ್ಶಿ), ಉಪಾಧ್ಯಕ್ಷರುಗಳಾಗಿ ಭಾಸ್ಕರ ಹೆಬ್ಬಾರ್, ಶಾಮಣ್ಣ, ಗಿರೀಶ ತಂತ್ರಾಡಿ, ಸ್ಮಿತಾರಾಣಿ, ಉಮೇಶ ರಾವ್, ಗೌರವ ಸಲಹೆಗಾರರಾಗಿ ರಾಮಚಂದ್ರ ರಾವ್, ಡಾ. ವೈ. ರವೀಂದ್ರನಾಥ ರಾವ್, ರಮೇಶ್ ರಾವ್ ಪಾಂಡೇಶ್ವರ, ಗುರುರಾಜ ರಾವ್ ಆರೂರು, ಅಶೋಕ ರಾವ್ ಬ್ರಹ್ಮಾವರ, ಪಿ. ಜಯರಾಮ ರಾವ್, ಸುದರ್ಶನ ರಾವ್ ಹಾಗೂ ಸದಸ್ಯರುಗಳಾಗಿ ಸತೀಶ ರಾವ್ ಕೂಡ್ಲಿ, ಚಾಮರಾಜ ರಾವ್ ಮೈರ್ಕೊಮೆ, ಕುಮಾರಸ್ವಾಮಿ ಬಿ ಆರ್, ಶ್ರೀ ಕೃಷ್ಣ ಶಾನುಭೋಗ್, ಗಣೇಶ ರಾವ್ ಮಸ್ಕಿಬೈಲ್ ಆಯ್ಕೆಯಾಗಿರುತ್ತಾರೆ.

ಮಹಿಳಾ ವಿಭಾಗ : ನಾಗರತ್ನ ಹೆಬ್ಬಾರ್ (ಅಧ್ಯಕ್ಷೆ), ಗೌರಿ ಎಸ್. ರಾವ್ (ಉಪಾಧ್ಯಕ್ಷೆ), ಚಂದ್ರಿಕಾ (ಕಾರ್ಯದರ್ಶಿ), ಗೌರವ ಸಲಹೆಗಾರರಾಗಿ ಶಕುಂತಲಾ ರಾವ್, ಗಾಯತ್ರಿ ಶಾಸ್ತ್ರಿ, ರಾಜೇಶ್ವರಿ ಎ. ರಾವ್, ವೀಣಾ ಗಣೇಶ ರಾವ್, ಜಯಲಕ್ಷ್ಮಿ ರಾವ್, ರಾಜೇಶ್ವರಿ ಯು. ರಾವ್.

ಯುವ ವೇದಿಕೆ : ರಾಮಚಂದ್ರ ರಾವ್, ಹೇರಂಜೆ (ಅಧ್ಯಕ್ಷರು), ಭರತ ರಾವ್, ಬಾರ್ಕೂರು (ಕಾರ್ಯದರ್ಶಿ), ಸ್ಪೂರ್ತಿ ರಾವ್, ತಂತ್ರಾಡಿ (ಉಪಾಧ್ಯಕ್ಷ), ಶಿವಪ್ರಸಾದ್, ಕೂಡ್ಲಿ (ಕೋಶಾಧಿಕಾರಿ), ಗೌರವ ಸಲಹೆಗಾರರಾಗಿ ರಾಘವೇಂದ್ರ ರಾವ್, ಮಸ್ಕಿಬೈಲ್, ಗಣೇಶ್ ಹೆಬ್ಬಾರ್, ಗುಡ್ಡೆಟ್ಟು, ಹರೀಶ್ ಹೆಬ್ಬಾರ್, ಜನಾರ್ದನ ರಾವ್, ಹಾವಂಜೆ

ವಲಯ ಪ್ರತಿನಿಧಿಗಳು : ಸತೀಶ್ ರಾವ್ (ಬಾರ್ಕೂರು), ಗಿರೀಶ್ ರಾವ್ (ಮಂದಾರ್ತಿ), ಗೌರಿ ಎಸ್. ರಾವ್ (ಬ್ರಹ್ಮಾವರ) ಜಲಜಾ ಎಸ್ . ರಾವ್ (ಸಾಲಿಗ್ರಾಮ), ಗಣೇಶ್ ಹೆಬ್ಬಾರ್ (ಶಿರಿಯಾರ), ಉಮೇಶ ರಾವ್ (ನೀಲಾವರ)

## ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ

■...1ನೇ ಪುಟದಿಂದ

ಮಂಡನೆಯಲ್ಲಿ ಎಲ್ಲಾ ಬಗೆಯ ಕಾಮಗಾರಿಯ ವೆಚ್ಚಗಳ ವಿವರಗಳನ್ನು ಸಭೆಗೆ ನೀಡಿ, ಈಗಾಗಲೇ ಕೈಗೊಂಡಿರುವ ಕಾಮಗಾರಿ ಕೆಲಸಗಳಾದ ಮುಖ್ಯ ಸಭಾಂಗಣದ ಮೇಲು ಛಾವಣಿಗೆ ಪಫ್‌ಶೀಟ್ ಹಾಗೂ ಫಾಲ್ಸ್ ಸೀಲಿಂಗ್ ಅಳವಡಿಕೆ, 46 ಟನ್ ಎ.ಸಿ. ಅಳವಡಿಕೆ, ಬಾಹ್ಯಭಾಗದ ಎ.ಸಿ.ಪಿ. ಶೀಟ್ ಅಳವಡಿಕೆ, 125 ಕೆ.ವಿ. ಜನರೇಟರ್ ಅಳವಡಿಕೆ, 100 ಕೆ.ವಿ. ಟ್ರಾನ್ಸ್‌ಫಾರ್ಮರ್ ಅಳವಡಿಕೆ, ಪ್ರವೇಶದ ವರಾಂಡ ಹಾಗೂ ಅರ್ಚಕರ ಮನೆಯ ಮಾಡಿನ ನವೀಕರಣ ಕೆಲಸಗಳು ಆರ್ಥಿಕ ವರ್ಷ 2022-23ರಲ್ಲಿ ಆರಂಭವಾಗಿ 2023-24ರ ವರ್ಷದ ಆರ್ಥಿಕ ತಃಖ್ತೆಯಲ್ಲಿ ಸೇರಿಸುವುದರ ಪೂರ್ಣ ಮಾಹಿತಿಯನ್ನು ಸಭೆಗೆ ನೀಡಿ ಅಂಗೀಕಾರ ಪಡೆಯಲಾಯಿತು. 2023-24ನೇ ವರ್ಷಕ್ಕೆ ಲೆಕ್ಕ ಪರಿಶೋಧಕರಾಗಿ ವರ್ಷಾ ಹಾವಂಜೆಯವರನ್ನು ನೇಮಿಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ತನ್ನ ಅಧ್ಯಕ್ಷೀಯ ಮಾತಿನಲ್ಲಿ ಕೇವಲ 56 ದಿನಗಳಲ್ಲಿ ಕಾಮಗಾರಿ ಮುಗಿಯಲು ಸಹಕರಿಸಿದ ಸರ್ವರನ್ನು ಸ್ಮರಿಸಿದರು. ಪ್ರಮುಖವಾಗಿ ಆರ್ಥಿಕ ಸಹಕಾರ ನೀಡಿದ ಸಮಾಜದ ಗಣ್ಯರನ್ನು ಅಭಿನಂದಿಸುತ್ತಾ ಶ್ರೀ ಶಾರದಾ ಮಂಟಪ ಇತ್ತೀಚಿನ ದಿನಗಳಲ್ಲಿ ಸಮಾಜದ ಹಾಗೂ ಗ್ರಾಹಕರ ಬಹುಬೇಡಿಕೆಯ ಪ್ರಥಮ ಪ್ರಾಶಸ್ತ್ಯದ ಮಂಟಪವಾಗಿ ರೂಪುಗೊಂಡಿರುವುದನ್ನು ಸಭೆಗೆ ತಿಳಿಸಿ, ಸಹಕರಿಸಿದ ಪದಾಧಿಕಾರಿಗಳನ್ನು, ಗೌರವ ಸಲಹೆಗಾರರನ್ನು, ಸಂಘದ ನಿರ್ದೇಶಕರನ್ನು ಕುರಿತು ಅಭಿನಂದನೆಯ ಮಾತುಗಳನ್ನು ಆಡಿದರು. ಸಭೆಯ ಅಂತ್ಯದಲ್ಲಿ ಉಪಾಧ್ಯಕ್ಷರಾದ ಶ್ರೀ ಅರವಿಂದ ಕುಮಾರ್ ಧನ್ಯವಾದ ಸಲ್ಲಿಸಿದರು.

## ಹಿರಿಯರ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ



ಕೇರಳದ ಕಣ್ಣೂರು ವಿವಿ ಸ್ಟೇಡಿಯಂನಲ್ಲಿ 75+ನ ಹಿರಿಯರಿಗೆ ನಡೆದ ಕೇರಳ ರಾಜ್ಯ ಮಾಸ್ಟರ್ಸ್ ಮಾನ್ಸೂನ್ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕಬ್ಬಿನಾಲೆ ತಿಂಗಳಮಕ್ಕಿಯ ವೈ.ಕುಮಾರಸ್ವಾಮಿ 1500 ಮೀ. ಹಾಗೂ 800 ಮೀ. ಓಟ ಮತ್ತು ಡಿಸ್ಕಸ್ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನದೊಂದಿಗೆ ಬೆಳ್ಳಿ ಪದಕ ಪಡೆದಿದ್ದಾರೆ.

ದೂರ ನಡಿಗೆಯ ಮೂಲಕ ಚಿರಪರಿಚಿತರಾಗಿರುವ ಅವರು ಎರ್ಮಾಳು ದಿ| ರಾಮರಾವ್ ಮತ್ತು ಸೀತಾಲಕ್ಷ್ಮೀ ದಂಪತಿಯ ಪುತ್ರ. ಅವರು ಈಗಾಗಲೇ ರಾಜ್ಯ, ಹೊರರಾಜ್ಯ, ಶ್ರೀಲಂಕಾ, ಮಲೇಶಿಯಾ ಮತ್ತು ಸಿಂಗಪುರದಲ್ಲಿ ನಡೆದ ಹಿರಿಯರ ಅನೇಕ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ.

Ph : 98459 92859
CA
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.







ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864

ಉದಯಾದ್ರಿ ಕೇಟರರ್ಸ್

ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.

ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ ಪಡಿಸಿಕೊಳ್ಳಬಹುದು.

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನ

**ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ – 574111**

ಸ್ವಸ್ತಿ। ಶ್ರೀ ಶೋಭಕೃತ್ ನಾಮ ಸಂವತ್ಸರದ ಅಶ್ವಯುಜ ಶುದ್ಧ ಪಾಡ್ಯದಿಂದ ನವಮಿ ದಿನಾಂಕ 15.10.2023 ರಿಂದ 23.10.2023 ಪರ್ಯಂತ

# ನವರಾತ್ರ ಮಹೋತ್ಸವವು

ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಪ್ರಸನ್ನ ಪಾರ್ವತೀ ಸನ್ನಿಧಾನದಲ್ಲಿ ಮಹಾಪೂಜೆ, ಹೂವಿನ ಪೂಜೆ ಜರಗಲಿರುವುದು.

**ದಿನಾಂಕ 22.10.2023ನೇ ಆದಿತ್ಯವಾರದಂದು ಶ್ರೀಕ್ಷೇತ್ರದಲ್ಲಿ**

## ಶ್ರೀ ಚಂಡಿಕಾಹೋಮ ಹಾಗೂ
## ಶ್ರೀ ಶಂಕರ ಭಗವತ್ಪಾದಾಚಾರ್ಯರ ಪ್ರತಿಷ್ಠಾ ವರ್ಧಂತಿಯು

**ಸಂಪನ್ನಗೊಳ್ಳಲಿರುವುದು.**

ಈ ದೇವತಾ ಕಾರ್ಯದಲ್ಲಿ ಭಾಗವಹಿಸಿ, ತನು–ಮನ–ಧನಗಳಿಂದ ಸಹಕರಿಸಿ, ಗಂಧಪ್ರಸಾದ ಮತ್ತು ಮಧ್ಯಾಹ್ನ ಜರಗುವ ಸಾರ್ವಜನಿಕ ಅನ್ನಸಂತರ್ಪಣೆಯನ್ನು ಸ್ವೀಕರಿಸಿ ಶ್ರೀ ದೇವಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಜಗದಾಭಿರಾಮ ಸ್ವಾಮಿ**
ಪ್ರಧಾನ ಅರ್ಚಕರು

**ಪಿ.ಡಿ. ಶೇಖರ ರಾವ್**
ಅಧ್ಯಕ್ಷರು

**ಕರುಣಾಕರ ಬೆಳ್ಳೆ**
**ಪಿ. ರಘುವೀರ ರಾವ್**
ಗೌರವಾಧ್ಯಕ್ಷರು

**ಶ್ರೀನಿವಾಸ ಶರ್ಮ ಪಾದೆಬೆಟ್ಟು**
ಕೋಶಾಧ್ಯಕ್ಷರು

**ನಯನಾಭಿರಾಮ ಸ್ವಾಮಿ**
ಕಾರ್ಯದರ್ಶಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಮತ್ತು ಸರ್ವ ಸದಸ್ಯರು, ಊರ ಹತ್ತು ಸಮಸ್ತರು**

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4–00ರಿಂದ

**ತಾ.01-11-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.20-10-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.19-10-2023, ತಾ.02-11-2023 ಮತ್ತು ತಾ.18-11-2023ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ತುಲಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 15.10.2023 | ಶರದೃತು ಅಶ್ವಯುಜ ಮಾಸದ ಶುಕ್ಲ ಪಕ್ಷಾರಂಭ, ನವರಾತ್ರಿ ಆರಂಭ | 29.10.2023 | ಶರದೃತು ಅಶ್ವಯುಜ ಮಾಸದ ಕೃಷ್ಣ ಪಕ್ಷಾರಂಭ |
| 17.10.2023 | ತುಲಾ ಸಂಕ್ರಮಣ | 01.11.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.06ಕ್ಕೆ |
| 19.10.2023 | ಶ್ರೀ ಲಲಿತಾ ಪಂಚಮಿ | 09.11.2023 | ಸರ್ವೈಕಾದಶಿ |
| 20.10.2023 | ಶ್ರೀ ಶಾರದಾ ಪೂಜಾರಂಭ | 11.11.2023 | ಸಾಯಂಕಾಲ ಜಲಪೂರಣಂ, 12.11.2023ರ ಬೆಳಿಗ್ಗೆ ಚಂದ್ರೋದಯದ ಸಮಯ 5.20ಕ್ಕೆ ತೈಲಾಭ್ಯಂಗ |
| 22.10.2023 | ಶ್ರೀ ದುರ್ಗಾಷ್ಟಮೀ | 12.11.2023 | ನರಕ ಚತುರ್ದಶಿ, ಯಮತರ್ಪಣ |
| 23.10.2023 | ಮಹಾನವಮಿ, ಶ್ರೀ ಶಾರದಾ ವಿಸರ್ಜನೆ, ಆಯುಧ ಪೂಜೆ | 13.11.2023 | ಅಮಾವಾಸ್ಯೆ, ದೀಪಾವಳಿ, ಬಲಿಪೂಜೆ |
| 24.10.2023 | ವಿಜಯ ದಶಮಿ | 14.11.2023 | ಗೋಪೂಜೆ, ಅಂಗಡಿಪೂಜೆ, ತುಳಸಿ ಪೂಜೆ ಆರಂಭ, ಶರದೃತು ಕಾರ್ತಿಕ ಮಾಸದ ಶುಕ್ಲ ಪಕ್ಷಾರಂಭ |
| 25.10.2023 | ಸರ್ವೈಕಾದಶಿ | | |
| 28.10.2023 | ಹುಣ್ಣಿಮೆ, ಖಂಡಗ್ರಾಸ ಚಂದ್ರಗ್ರಹಣ | 16.11.2023 | ವೃಶ್ಚಿಕ ಸಂಕ್ರಮಣ |

## ಶುಭ ವಿವಾಹ

ಶ್ರೀ ಸತೀಶ್ ರಾವ್ ಬಡಾ ಎರ್ಮಾಳು ಮತ್ತು ಶ್ರೀಮತಿ ಕಸ್ತೂರಿ ಪಡುಬೆಳ್ಳೆ ಅವರ ಪುತ್ರ **ಚಿ। ಡಾ. ಮಿಥುನ್** ಅವರ ವಿವಾಹವು ದಿ। ಬಿ. ವಾಮನ್ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ಅವರ ಪುತ್ರಿ **ಚಿ।ಸೌ। ಡಾ। ವಂದನಾ**ರವರೊಂದಿಗೆ ತಾ.21.09.2023 ರಂದು ಬ್ರಹ್ಮಾವರದ ಶ್ಯಾಮಿಲಿ ಶನಯ ಸಭಾಂಗಣದಲ್ಲಿ ಜರಗಿತು.

## ನಿಧನ




ಶ್ರೀ ಅದ್ಯಪಾಡಿ ವಿಜಯಕುಮಾರ್ ಭಟ್‌ರವರು 61ನೇ ವಯಸ್ಸಿನಲ್ಲಿ ತಾ.15.09.2023 ರಂದು ನಿಧನರಾದರು. ಕ್ಯಾಟರಿಂಗ್ ವ್ಯವಹಾರವನ್ನು ನಡೆಸುತ್ತಿದ್ದ ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಶ್ರೀ ಕುಡ್ವಿ ವಿಜಯ ಕುಮಾರ್ ಅವರು ತಾ.19.09.2023ರಂದು ನಿಧನರಾದರು. ಅವರು ಒಬ್ಬಳು ಪುತ್ರಿ ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.

★★★★ ★★★★



ಶ್ರೀ ದಿ। ಸದಾಶಿವ ರಾವ್ ಅವರ ಪತ್ನಿ ಶ್ರೀಮತಿ ಭಾರತಿಯವರು ತಾ.20.09.2023ರಂದು ಗೋರೆಗಾಂವ್‌ನಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★




ನಂದಿಕೂರು ಪ್ರಸನ್ನಕುಮಾರ್‌ರವರು 81ನೇ ವಯಸ್ಸಿನಲ್ಲಿ ತಾ.22.09.2023 ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ಶ್ರೀ ಕುಂಪಲ ಜಗದೀಶ್ ರಾವ್‌ರವರು 54ನೇ ವಯಸ್ಸಿನಲ್ಲಿ ತಾ.21.09.2023 ರಂದು ನಿಧನರಾದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ತೆಂಕಿಲ ಕುಟುಂಬಕ್ಕೆ ಸೇರಿದ ಮೈಸೂರು ಪಾಂಡವಪುರ ನಿವಾಸಿ ಸುಭಾಷ್‌ರವರು 76ನೇ ವಯಸ್ಸಿನಲ್ಲಿ ತಾ.27.09.2023 ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಅಡೂರು ಚರಕಂಡ ವೆಂಕಪ್ಪಯ್ಯ ಮೇರ್ಟ ಅವರ ಪತ್ನಿ ಪದ್ಮಾಕ್ಷಿಯವರು ತಾ.02.10.2023 ರಂದು ನಿಧನರಾದರು. ಇವರು ಪತಿ, ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಗೋವಾದಲ್ಲಿ ಉದ್ಯಮಿಯಾಗಿದ್ದ ಪಾಂಡೇಶ್ವರ ಕೃಷ್ಣಮೂರ್ತಿ ಅವರು 75ನೇ ವಯಸ್ಸಿನಲ್ಲಿ ತಾ.25.09.2023 ರಂದು ನಿಧನರಾದರು. ಸಾಹಿತ್ಯ ಯಕ್ಷಗಾನ ಕಲೆಗೆ ಪ್ರೋತ್ಸಾಹ ನೀಡುವ ಮೂಲಕ ತಮ್ಮ ತಂದೆಯವರ ಯಕ್ಷಗಾನ ಕಲೆಗೆ ಗೌರವ ಸಲ್ಲಿಸುತ್ತಿದ್ದರು. ಅವರು ಪತ್ನಿಯನ್ನು ಅಗಲಿದ್ದಾರೆ.

★★★★ ★★★★



ಕೀರ್ತಿಶೇಷ ಸುಬ್ರಾಯ ಭಟ್ ನೆಟ್ಲ ಕಡೇಶಿವಾಲಯ ಇವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀಯಮ್ಮ ಅವರು 75ನೇ ವಯಸ್ಸಿನಲ್ಲಿ ನಂದಾವರದಲ್ಲಿರುವ ತಮ್ಮ ಮಗಳ ಮನೆಯಲ್ಲಿ ತಾ.04.10.2023ರಂದು ನಿಧನರಾದರು. ಅವರು ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯನ್ನು ಅಗಲಿದ್ದಾರೆ.

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



**RAJESH POWER PRESS**

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

the right Place for the right customers

**QUALITY FIRST AND ALWAYS**



**ಕೆ. ದಿನಮಣಿ ಶಾಸ್ತ್ರೀ** ಮೊಬೈಲ್ : 8277190632, 9482284970





**ಚಿತ್ತಾರ ಫೋಟೋ ಆರ್ಟ್**

ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ

ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ–576213.

*With Best Complimemts From*

**SRI M. SHAILESH RAO** Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

## ಪಡುಬಿದ್ರಿ : "ಸೋಣ ಸಂಭ್ರಮ ಕಾರ್ಯಕ್ರಮ"



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಮಹಿಳಾ ವೇದಿಕೆ ವತಿಯಿಂದ ಸೋಣ ಸಂಭ್ರಮ ಕಾರ್ಯಕ್ರಮವು ದಿನಾಂಕ 10.09.2023ನೇ ಆದಿತ್ಯವಾರ ಬಾಲಗಣಪತಿ ದೇವಸ್ಥಾನದ ವಠಾರದಲ್ಲಿ ಜರುಗಿತು. ಸೋಣ ತಿಂಗಳು ಹಬ್ಬದ ತಿಂಗಳಾಗಿದ್ದು ಹೆಚ್ಚಿನ ಹಬ್ಬಗಳೆಲ್ಲ ಸೋಣ ತಿಂಗಳಲ್ಲಿ ಬರುತ್ತದೆ. ನಮ್ಮ ಮನಸ್ಸು ಉಲ್ಲಾಸದಾಯಕವಾಗಿರುವುದರಿಂದ ಒಳ್ಳೆ ತಿಂಡಿ ತಿನಿಸುಗಳನ್ನು ಸ್ವೀಕರಿಸಬೇಕು ಎಂಬ ಉದ್ದೇಶದಿಂದ ಮಹಿಳಾ ವೇದಿಕೆಯ ವತಿಯಿಂದ ತಿಂಡಿ ತಿನಿಸುಗಳನ್ನು ಏರ್ಪಡಿಸಲಾಗಿದೆ ಎಂದು ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್‌ರವರು ಸೋಣ ಸಂಭ್ರಮದ ವೇದಿಕೆಯಲ್ಲಿ ದಿಕ್ಸೂಚಿ ಮಾತಿನಲ್ಲಿ ತಿಳಿಸಿದರು. ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಅಧ್ಯಕ್ಷರಾದ ಶ್ರೀ ಎಂ.ಕೆ. ಮೋಹನ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಇನ್ನ, ಸಂಚಾಲಕರು ಶ್ರೀಮತಿ ಸಾವಿತ್ರಿ ಅರವಿಂದರಾವ್, ಯುವ ವೇದಿಕೆ ಅಧ್ಯಕ್ಷರಾದ ಶ್ರೀ ಎಸ್. ಜನಾರ್ಧನ್ ರಾವ್ ಹಾಗೂ ಜೀ ಕನ್ನಡದಲ್ಲಿ ಸರಿಗಮಪ ಲಿಟಲ್ ಚಾಂಪ್ಸ್‌ನಲ್ಲಿ ಎರಡನೇ ವಿಜೇತೆ ಕುಮಾರಿ ತನುಶ್ರೀ ಮಂಗಳೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ನಮ್ಮ ಸಂಘದ ವ್ಯಾಪ್ತಿಯ ಹಿರಿಯ ಗೃಹಿಣಿಯರಾದ ಶ್ರೀಮತಿ ಶಶಿಕಲಾ ಚಂದ್ರಶೇಖರ್ ರಾವ್ ಬೆಳ್ಮಣ್ಣು, ಶ್ರೀಮತಿ ಭಾಗೀರಥಿ ಕುಮಾರಸ್ವಾಮಿ ಪಡುಬಿದ್ರಿ, ಶ್ರೀಮತಿ ಸುನೀತಾ ಶೇಖರ್ ರಾವ್ ಪಡುಬಿದ್ರಿ, ಶ್ರೀಮತಿ ವಿದ್ಯಾವತಿ ಭವಾನಿ ಶಂಕರ್ ರಾವ್ ಪಲಿಮಾರು ಇವರಿಗೆ ಗೌರಾವಾರ್ಪಣೆ ಸಲ್ಲಿಸಲಾಯಿತು. ಬಳಿಕ ಕುಮಾರಿ ತನುಶ್ರೀ ಮಂಗಳೂರು ಇವರಿಗೆ ಸಂಘದ ವತಿಯಿಂದ ಸನ್ಮಾನಿಸಲಾಯಿತು ಹಾಗೂ ಶ್ರೀ ಲಕ್ಷ್ಮೀಗೋಪಾಲಕೃಷ್ಣ ಟ್ರಸ್ಟ್ ವತಿಯಿಂದ 10,000 ನಿರಖು ಠೇವಣಿ ಪತ್ರವನ್ನು ನೀಡಿ ಗೌರಾರ್ಪಣೆ ಸಲ್ಲಿಸಲಾಯಿತು. ಮಾ. ಅಖಿಲೇಶ್ ಇವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಸುಪ್ರೀತಾ ರವಿ ರಾವ್ ಪ್ರಾರ್ಥಿಸಿ, ಶ್ರೀಮತಿ ಧರ್ಮಪ್ರಭ ವಿದ್ಯಾರಣ್ಯ ರಾವ್ ಸ್ವಾಗತಿಸಿದರು. ಶ್ರೀಮತಿ ವೇದಾವತಿ ಲಕ್ಷ್ಮಿಕಾಂತ್ ರಾವ್ ಪ್ರಸ್ತಾವನೆ ಮಾತನಾಡಿ, ಶ್ರೀಮತಿ ವೇದಾವತಿ ಡಿ. ರಾವ್, ಶ್ರೀಮತಿ ಸೌಮ್ಯ ಶಂಕರ್ ರಾವ್, ಶ್ರೀಮತಿ ರೂಪ ಸುರೇಶ್ ರಾವ್, ಶ್ರೀಮತಿ ರೇಣುಕಾ ಎ. ರಾವ್ ಹಾಗೂ ಶ್ರೀಮತಿ ರಮ್ಯಾ ಅರುಣ್ ರಾವ್ ಸನ್ಮಾನ ಪತ್ರ ವಾಚಿಸಿದರು. ಶ್ರೀಮತಿ ಮಂಜುಶ್ರೀ ಅನಂತರಾಮ ರಾವ್ ವಂದಿಸಿ, ಶ್ರೀಮತಿ ಪವಿತ್ರ ಕೃಷ್ಣರಾವ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಕುಮಾರಿ ತನುಶ್ರೀ ಇವರಿಂದ ಸುಮಧುರ ಹಾಡುಗಳು ಹಾಗೂ ಮಕ್ಕಳ ನೃತ್ಯ ಮತ್ತು ಮಹಿಳಾ ವೇದಿಕೆಯಿಂದ ತಯಾರಿಸಲ್ಪಟ್ಟ ರುಚಿಕರವಾದ ಖಾದ್ಯಗಳು ಮನಸೂರೆಗೊಂಡವು. ಕಾರ್ಯಕ್ರಮದಲ್ಲಿ ಆಹ್ವಾನಿತ ಎಲ್ಲಾ ಸಂಘದ ಅಧ್ಯಕ್ಷರುಗಳು, ಪದಾಧಿಕಾರಿಗಳು, ಸದಸ್ಯರು, ವಿವಿಧ ಗಣ್ಯರು ಸಂಘದ ಎಲ್ಲಾ ಪದಾಧಿಕಾರಿಗಳು ಸದಸ್ಯರು ಉಪಸ್ಥಿತರಿದ್ದರು. ಸ್ಥಾನಿಕ ಬ್ರಾಹ್ಮಣ ಸಭಾ ಹಾಗೂ ಯುವ ವೇದಿಕೆಯವರು ಕಾರ್ಯಕ್ರಮಕ್ಕೆ ಸಹಕರಿಸಿದರು.

### ಪ್ರತಿಭಾನ್ವಿತರು



**ಕುಮಾರಿ ಮಾನಸ**

ಕೊರಂಗ್ರಪಾಡಿ ಉಡುಪಿ ಶ್ರೀಮತಿ ಸಹನಾ ಮತ್ತು ಶ್ರೀ ಮಂಜುನಾಥ ರಾವ್ ದಂಪತಿಯ ಪುತ್ರಿ ಕುಮಾರಿ ಮಾನಸ ಇವರು ಬಿ.ಎ.ಎಂ.ಎಸ್.ನಲ್ಲಿ ಪದವಿಯಲ್ಲಿ 1027 (80.6%) ಅಂಕಗಳಿಸಿ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿರುತ್ತಾರೆ (ಕ್ಯಾಂಪಸ್‌ನಲ್ಲಿ 3 ನೇ ರ್‍ಯಾಂಕ್). ಈಕೆ ಎಸ್.ಡಿ.ಎಂ. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಉದ್ಯಾವರ ಕಾಲೇಜಿನ ವಿದ್ಯಾರ್ಥಿನಿ. ಇವರಿಗೆ ಶ್ರೀಶಾರದಾ ಅಭಿನಂದನೆಗಳು



**ಕುಮಾರಿ ಹರ್ಷಿತಾ ಶಾನುಭೋಗ್**

ಶ್ರೀ ಅರೆಹೊಳೆ ನಾಗೇಶ ಶಾನಭೋಗ್ ಮತ್ತು ಶ್ರೀಮತಿ ಸುಧಾಮಾಲಿನಿ ದಂಪತಿಗಳ ಪುತ್ರಿ ಕುಮಾರಿ ಹರ್ಷಿತಾ ಶಾನುಭೋಗ್ ಇವರು ಬಿ.ಎ.ಎಂ.ಎಸ್.ನಲ್ಲಿ ಪದವಿಯಲ್ಲಿ 964 (75.65%) ಅಂಕಗಳಿಸಿ ಉತ್ತೀರ್ಣ ರಾಗಿರುತ್ತಾರೆ. ಈಕೆ ಮೂಡುಬಿದ್ರೆಯ ಆಳ್ವಾಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ. ಇವರಿಗೆ ಶ್ರೀಶಾರದಾ ಅಭಿನಂದನೆಗಳು

## ಕೃಷಿಋಷಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಅಮ್ಮೈ ಶ್ರೀ ಬಿ.ಕೆ ದೇವರಾವ್ ರವರಿಗೆ ಸಮಾಜ ಬಂಧುಗಳಿಂದ ಸನ್ಮಾನ



ಸರಕಾರದ ಯಾವುದೇ ಪ್ರಶಸ್ತಿ ಬರುವುದರಲ್ಲಿ ಶೇ. 50 ಸಾಧನೆ ಇದ್ದರೆ, ಉಳಿದ 50 ಶಿಫಾರಸು. ಇದು ಇಂದಿನ ಪ್ರಶಸ್ತಿಗಳ ಸ್ಥಿತಿ. ಇದಕ್ಕೆ ತದ್ವಿರುದ್ಧವಾಗಿ ಸಾಧನೆಯ ಆಧಾರದ ಮೇಲೆಯೇ, ಯಾವುದೇ ಶಿಫಾರಸು ಆಮಿಷಗಳಿಲ್ಲದೆ ರಾಷ್ಟ್ರ ಮಟ್ಟದ ಪ್ರಶಸ್ತಿ ಒಬ್ಬನಿಗೆ ಲಭಿಸುತ್ತದೆ ಎಂದಾದರೆ ಅದಕ್ಕೆ ಕಾರಣ ಪ್ರಾಮಾಣಿಕ, ಶ್ರಮಜೀವಿ, ಅಪ್ರತಿಮ ದೇಶಭಕ್ತ, ದೇಶವೇ ದೇಗುಲ ಎಂದು ಪೂಜಿಸುವ , ತನಗಾಗಿ ಎಂಬ ಶಬ್ದ ದ ಅರ್ಥವನ್ನೇ ಬದಲಿಸಿದ ನಮ್ಮ ಪ್ರಧಾನಿ. ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜ್ಯದ ಅನೇಕರಿಗೆ ಪ್ರಶಸ್ತಿ ಬಂದದ್ದನ್ನು ಗಮನಿಸಿದರೆ ಇವರಿಗೂ ರಾಷ್ಟ್ರ ಪ್ರಶಸ್ತಿ ಲಭಿಸಲು ಸಾಧ್ಯವೇ ಎಂದು ಮೂಗಿನ ಮೇಲೆ ಬೆರಳಿಡುವಂತೆ ಸ್ಥಿತಿ.

ಇದಕ್ಕೆ ನಮ್ಮ ಸಮಾಜದ ಬಂಗಾಡಿ ಕುಟುಂಬದ ಓರ್ವ ಸದಸ್ಯರೂ ಭಾಗಿಯಾಗಿದ್ದಾರೆ ಎಂದರೆ ನಮ್ಮ ಸಮಾಜಕ್ಕೆ ಕಿರೀಟವಿಟ್ಟಂತೆ. ಅವರೇ ನಮ್ಮ **ಅಮ್ಮೈ ದೇವರಾಯರು**. ಸುಮಾರು 175 ಕ್ಕಿಂತಲೂ ಅಧಿಕ ಭತ್ತದ ತಳಿಯನ್ನು ಸಂಗ್ರಹಿಸಿ, ಬಿತ್ತಿ ಬೆಳೆದು, ಕಾಪಿಟ್ಟ ಇವರು ಕೃಷಿ ಋಷಿಯೇ ಸರಿ. ತನಗೆ, ತಮ್ಮ ಮಕ್ಕಳಿಗೆ ಇದ್ದರೆ ಸಾಕು ಎಂದು ಭಾವಿಸುವ ಈ ಕಾಲಘಟ್ಟದಲ್ಲಿ ದೇಶದ ಆಹಾರ ಉತ್ಪಾದನೆಯ ಮೂಲಧಾರವಾದ ಈ ಬೀಜ ಸಂಗ್ರಹವನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ, ತನ್ನ ಆತ್ಮತೃಪ್ತಿ ಗಾಗಿ ಮಾಡಿದ ಕಾರ್ಯ ದೇಶದ ಏಳ್ಗೆ ಬಯಸುವವರ ಕದ ತಟ್ಟಿ ಸುಮಾರು 80 ವಯಸ್ಸಿನ ಯುವಕನಿಗೆ ಇಂದು ರಾಷ್ಟ್ರಪ್ರಶಸ್ತಿಯನ್ನು ತಂದುಕೊಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಭತ್ತದ ಸಾಗುವಳಿ ಎಂದರೆ ಮಾರು ದೂರ ಓಡುವವರಿದ್ದಾರೆ. ಕಾರಣ ಉದಾಸೀನವಲ್ಲ. ಬೆಳೆ ಬೆಳೆಸಲು ಆಗುವ ಶ್ರಮ ಹಾಗೂ ವೆಚ್ಚವನ್ನು ಗಮನಿಸಿದರೆ ಕೃಷಿ ಕಾರ್ಮಿಕರ ಅಭಾವ ಹವಾಮಾನ ವೈಪರೀತ್ಯದಿಂದಾಗಿ ಯಾರಿಗೂ ಬೇಡವಾದ ಕೃಷಿಯ ಸ್ಥಾನದಲ್ಲಿ ಭತ್ತದ ವ್ಯವಸಾಯ ನಿಂತಿದೆ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ನಮ್ಮ ದೇವರಾಯರು ಈಗಲೂ ಸಾಗುವಳಿ(ಭತ್ತದ ವ್ಯವಸಾಯ) ಮಾಡುತ್ತಾರೆಂದರೆ ಇದು ಒಂದು ಯಶಸ್ಸೇ ಸರಿ. ಇದು ಮಾತ್ರವಲ್ಲದೆ, ಬೆಳೆಯಲ್ಲಿ ಹೆಚ್ಚು ಇಳುವರಿ ಬರಬೇಕೆಂದರೆ ರಾಸಾಯನಿಕ ಗೊಬ್ಬರ, ಕಳೆ, ಕೀಟನಾಶಕಗಳ ಬಳಕೆ ಅನಿವಾರ್ಯ ಎಂದು ನಂಬಿರುವ ಈ ಸಮಯದಲ್ಲಿ, ಬೆಳೆದ ಬೆಳೆಯನ್ನು ತಾನೂ ಉಣ್ಣಬೇಕು, ಅದು ಆಹಾರವಾಗಿರಬೇಕೇ ಹೊರತು ವಿಷವಾಗಬಾರದು ಎಂಬ ತತ್ವವನ್ನು ಪಾಲಿಸುವ ಶ್ರೀ ದೇವರಾಯರು ಸಾವಯವ ಪದ್ಧತಿಯಲ್ಲೇ ಬೆಳೆ ಬೆಳೆಸುತ್ತಾರೆ. ಅದನ್ನು ಉಂಡ ಶರೀರ 80 ರ ವಯಸ್ಸಿನಲ್ಲೂ ದುಡಿಯಲು ಅವರಿಗೆ ಹುಮ್ಮಸ್ಸು ನೀಡಿದೆ. ಇವರಲ್ಲಿ ಭತ್ತ ಮಾತ್ರವಲ್ಲದೆ, ಊರಿನ(ನಾಟಿ) ಜಾತಿಯ 60 ಮಾವಿನ ತಳಿಗಳೂ, 80 ಬಗೆಯ ಹಲಸಿನ ತಳಿಗಳೂ





ಇವೆ.

12-09-2023 ರಂದು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಮ್ಮ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಇವರಿಂದ **ಉತ್ತಮ ತಳಿ ಸಂರಕ್ಷಕ ಪ್ರಶಸ್ತಿ**ಗೆ ಭಾಜನರಾದ ನಮ್ಮ ಸಮಾಜದ ಹಿರಿಯ ಚೇತನ ಬಂಗಾಡಿಯ ಅಮ್ಮೈ ಶ್ರೀಯುತ ದೇವರಾವ್ ಇವರನ್ನು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ 23-09-2023 ರಂದು ಅವರ ಸ್ವಗೃಹದಲ್ಲಿ ಸನ್ಮಾನಿಸಲಾಯಿತು.

ಶ್ರೀ ಬಿ.ಕೆ ದೇವರಾವ್ ರವರ ಬಗ್ಗೆ ಅವರ ಸಹೋದರರಾದ ಕುದ್ರೋಳಿ ಶ್ರೀ ಬಿ.ಕೆ. ಸುಬ್ಬರಾವ್, ಹಾಗೂ ಕುಂಚಿಲ ಶ್ರೀ ಬಿ.ಕೆ. ಗೋಪಾಲ ರಾವ್‌ರವರು ಮಾತನಾಡಿ ಸಹೋದರನ ಸಾಧನೆಯನ್ನು ಕೊಂಡಾಡಿದರು. ಪೂರ್ವಾಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್, ಶ್ರೀ ಕ್ಷೇತ್ರ ಧರ್ಮಸ್ಥಳದ ಪಾರುಪತ್ಯಗಾರರಾದ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್‌ರವರು ಮಾತನಾಡಿ ಭತ್ತದ ಬೆಳೆ ನಾಶವಾಗುತ್ತಿರುವ ಈ ಕಾಲಘಟ್ಟದಲ್ಲಿ ಭತ್ತದ ಬೆಳೆಯ ಕುರಿತಾಗಿಯೇ ವಿಪ್ರ ಸಮಾಜದಲ್ಲಿ ಅತೀ ಸಣ್ಣ ಸಮುದಾಯವಾಗಿರುವ ಸ್ಥಾನಿಕ ಸಮಾಜದ ಓರ್ವ ಸದಸ್ಯ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದು ವಿಪ್ರಸಮುದಾಯಕ್ಕೆ ಹೆಮ್ಮೆ ತಂದಿದ್ದಾರೆ ಎಂದರು. ಸಭಾದ ಅಧ್ಯಕ್ಷರು ಮಾತನಾಡಿ ನನ್ನ ಅಧ್ಯಕ್ಷಾವಧಿಯಲ್ಲಿ ದೇವರಾಯರಿಗೆ ಪ್ರಶಸ್ತಿ ಸಿಕ್ಕಿರುವುದು ನನ್ನ ಯೋಗ ಎಂದು ಹೇಳಿ ಶುಭಾಶಯ ಹೇಳಿದರು.

ಸಭಾದ ಕಾರ್ಯದರ್ಶಿ ಶ್ರೀ ವಿಕಾಸ್ ರಾವ್ ಮಾತನಾಡಿ ಶ್ರೀ ದೇವರಾಯರು ನಮ್ಮ ಸಮಾಜದ ಇತರರಿಗೆ ಪ್ರೇರಣೆಯಾಗಬಲ್ಲ **ಕೃಷಿ ಋಷಿ** ಎಂದರೆ ತಪ್ಪಾಗಲಾರದು... ಒಟ್ಟಾರೆಯಾಗಿ ತಮ್ಮ ಈ ಸಾಧನೆಗೆ ವಿವಿಧ ಪ್ರಶಸ್ತಿಗಳು ಲಭಿಸಿ, ನಮ್ಮ ಸಮಾಜದ ಕೀರ್ತಿ ಪತಾಕೆಯು ಮುಗಿಲೆತ್ತರಕ್ಕೆ ತಲುಪಲಿಯೆಂಬ ಆಶಯ ನಮ್ಮದು ಎಂದು ಆಗಮಿಸಿದ ಸಮಾಜ ಬಂಧುಗಳಿಗೆ ಧನ್ಯವಾದವನ್ನಿತ್ತರು.

ಪ್ರಸ್ತುತ ಕಾರ್ಯಕ್ರಮದ ವೇದಿಕೆಯಲ್ಲಿ ವಲಯದ ಅಧ್ಯಕ್ಷರುಗಳು, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಸ್ವಾತಿ ವಿಶ್ವಜಿತ್, ಕಾರ್ಯದರ್ಶಿ ಶ್ರೀಮತಿ ಸವಿತಾ, ನಿರ್ದೇಶಕರುಗಳು ಇದ್ದರು. ಶ್ರೀ ಬಿ.ಕೆ ಧನಂಜಯ ರಾವ್ ನಿರ್ವಹಿಸಿದ ಕಾರ್ಯಕ್ರಮದಲ್ಲಿ ಬಂಗಾಡಿ ವಲಯದ ಅಧ್ಯಕ್ಷರಾದ ಶ್ರೀ ಉಮೇಶ್ ರಾವ್ ಸ್ವಾಗತಿಸಿದರು. ಸುಮಾರು 40 ಸದಸ್ಯರುಗಳು ಭಾಗವಹಿಸಿದ್ದರು.

# ಶ್ರೀ ಶಾರದಾ ಕ್ರೆಡಿಟ್ ಕೋ–ಆಪ್ ಸೊಸೈಟಿ ಮಹಾಸಭೆ



ಶ್ರೀ ಶಾರದಾ ಕ್ರೆಡಿಟ್ ಕೋ–ಆಪ್ ಸೊಸೈಟಿಯ ವಾರ್ಷಿಕ ಮಹಾಸಭೆಯು ಭೂ–ವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಎಂ. ಸದಾನಂದ ರಾವ್ ಅಧ್ಯಕ್ಷತೆ ವಹಿಸಿ ವರದಿ ಸಾಲಿನ ಅಂತ್ಯಕ್ಕೆ ಸದಸ್ಯರಿಂದ 27.70 ಲಕ್ಷ ರೂ. ಪಾಲು ಬಂಡವಾಳ, 28.81 ಕೋಟಿ ರೂ. ಠೇವಣಿ ಸಂಗ್ರಹಿಸಿ 25.43 ಕೋಟಿ ರೂ. ಸಾಲ ವಿತರಿಸಿದೆ, 34.74 ಲಕ್ಷ ರೂ. ನಿವ್ವಳ ಲಾಭಗಳಿಸಿದೆ, ಸಂಘವು ಸದಸ್ಯರಿಗೆ ಶೇ.12ರಷ್ಟು ಡಿವಿಡೆಂಡ್ ಘೋಷಿಸಿದೆ ಎಂದರು. ಉಪಾಧ್ಯಕ್ಷ ಯು. ಅರವಿಂದ ಕುಮಾರ್, ನಿರ್ದೇಶಕರಾದ ಕೃಷ್ಣಕುಮಾರ್ ರಾವ್, ಬಿ. ಜಯರಾಮ ರಾವ್, ವೈ. ಮೋಹನ್ ರಾವ್, ಕೆ. ಗಣೇಶ್ ರಾವ್, ಬಿ.ಕೃಷ್ಣಮೂರ್ತಿ ರಾವ್, ವೈ. ವಿಠಲರಾವ್ ಎಂ. ಪದ್ಮಾನಂದ ರಾವ್, ವೈ. ಪ್ರಕಾಶ್ ಕುಮಾರ್, ಹರಿಣಾಕ್ಷಿ ಎನ್. ರಾವ್, ವೇದಾವತಿ ಡಿ. ರಾವ್, ಸಲಹೆಗಾರರಾದ ಎಂ.ಕೆ. ದಿವಾಕರ ರಾವ್, ಉದಯ ಬಿ. ರಾವ್ ಉಪಸ್ಥಿತರಿದ್ದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಸಿ.ಎ.ಉತ್ತೀರ್ಣರಾದ ಸಂಘದ ಸದಸ್ಯ ಶಿವಪ್ರಸಾದ್ ರಾವ್, ಆರೂರು ಪಂಚಾಯತಿ ಅಧ್ಯಕ್ಷ ಎ. ಗುರುರಾಜ್ ರಾವ್, ಎಲ್ಲೂರು ಪಂಚಾಯತಿ ಅಧ್ಯಕ್ಷ ರವಿರಾಜ್ ರಾವ್ ಅವರನ್ನು ಸಮ್ಮಾನಿಸಲಾಯಿತು. ಕಾರ್ಯದರ್ಶಿ ಎನ್. ಪಟ್ಟಾಭಿರಾಮ ರಾವ್ ಲೆಕ್ಕಪತ್ರ ವಾಚಿಸಿದರು. ಶಾಖಾ ವ್ಯವಸ್ಥಾಪಕಿ ಭಾರತಿ ಎಸ್. ರಾವ್ ಪ್ರಾರ್ಥಿಸಿ, ವ್ಯವಸ್ಥಾಪಕಿ ಸೌಮ್ಯಲತಾ ವಂದಿಸಿದರು.

ಸಂಘದ ಸದಸ್ಯತನ ಪಡೆಯದೇ ಇರುವ ಸಮಾಜ ಬಾಂಧವರು ಹಾಗೂ ಈಗಾಗಲೇ ಸದಸ್ಯತನ ಪಡೆದಿದ್ದು ಹೆಚ್ಚಿನ ಶೇರು ಮೊತ್ತವನ್ನು ಪಡೆಯಲು ಇಚ್ಛಿಸುವ ಸಮಾಜ ಬಾಂಧವರಿಗೆ ದಿನಾಂಕ 24.10.2023ರ ಮಂಗಳವಾರ ವಿಜಯದಶಮಿಯ ದಿನದಂದು ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು, ಉಡುಪಿಯಲ್ಲಿ ವಿಶೇಷವಾಗಿ "ಸದಸ್ಯತನ ನೋಂದಣಿ" ಕೌಂಟರ್ ತೆರೆಯಲಾಗುತ್ತದೆ. ಸಮಾಜ ಬಾಂಧವರು ಇದರ ಸದುಪಯೋಗ ಪಡೆದುಕೊಂಡು, ಸಂಘದ ಪಾಲು ಬಂಡವಾಳ ಹೆಚ್ಚಿಸುವಲ್ಲಿ ಸಹಕರಿಸಬೇಕಾಗಿ ವಿನಂತಿ. ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, 2 ಪಾಸ್‌ಪೋರ್ಟ್ ಸೈಜ್ ಫೋಟೋ, ನಿಗದಿತ ಶೇರು ಮೊತ್ತ ಪಾವತಿಸಿ ಸಂಘದ ಸದಸ್ಯತನ ಪಡೆದುಕೊಳ್ಳಬಹುದಾಗಿದೆ. ಈಗಾಗಲೇ ರೂ.100 ಮುಖಬೆಲೆಯ 1 ಶೇರು ಪಡೆದಿರುವ ಸದಸ್ಯರು ಕನಿಷ್ಟ 5 ಶೇರು (ರೂ.500) ಪಡೆದುಕೊಳ್ಳಬೇಕಾಗಿ ತಮ್ಮಲ್ಲಿ ವಿನಂತಿ. ಸದಸ್ಯರು ತಮ್ಮ ವಿಳಾಸ ಬದಲಾವಣೆ ಆಗಿದ್ದಲ್ಲಿ ದಯವಿಟ್ಟು ತಿಳಿಸಬೇಕಾಗಿ ವಿನಂತಿ.





Welcome to Kanasu The Resort

Escape to Kanasu for an unforgettable nature retreat.
Enjoy rustic pine cottages, warm hospitality, and local culinary delights.
Reconnect with family amidst nature's beauty.

Key Features & Amenities

- 6 Cottages
- 1 Farm House
- AC Rooms
- Swimming Pool
- Free Wifi
- Free Parking
- Free Breakfast
- Goushala
- Dhaba Style Restaurant
- All Kinds of Events


List of Games and Activities:

- Carom, Chess
- Jenga, Dart
- Fussball
- Mini Golf
- Basketball
- Trampoline
- Cricket
- Mini Football
- Badminton

For More Information

+91 90191 26470 www.kanasuresort.com Kukkehalli, Udupi - 576124

SUMIRASA - Full Villa in Udupi for Stay




Relax with the whole family at this peaceful place to stay with all major attractions at a short distance. Enjoy the sea waves at Malpe beach within 5KM drive. Seak blessing at the famous Srikrishna Temple and Anantheshwara Temple which is just 2KM. Perfect place for hosting wedding guests with major wedding venues and convention halls near by.

WHAT THIS PLACE OFFERS

- GARDEN VIEW
- BATHROOM
  Cleaning products, Bidet, Hot water
- BEDROOM AND LAUNDRY
  Free washing machine
- ESSENTIALS
  Towels, bed sheets, soap, Hangers
- BED LINEN
  Cotton linen
- CLOTHES DRYING RACK
- CLOTHES STORAGE: Wardrobe and drawers
- ENTERTAINMENT
  TV and Books and reading material
- HEATING AND COOLING
  AC – split-type ductless system, Ceiling fan
- INTERNET AND OFFICE
  Wifi
- KITCHEN AND DINING
  Kitchen Space where guests can cook
- REFRIGERATOR
- COOKING BASICS
- DISHES AND SILVERWARE





For Booking Contact : +91 98220 28537
You can also visit https://www.airbnb.co.in/rooms

With Best Compliments From :

BUILDING DREAMS, ENHANCING LIVES.


NAKSHATRA
GANDHINAGAR


SOLITAIRE
HATHILL,


HABITAT ONE 54
DEREBAIL


ANANTESSH
CAR STREET,

Land® Trades
BUILDERS & DEVELOPERS
BUILDING TRUST, DELIVERING VALUE

MANGALURU'S LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :


SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar